## 104. ಬನದಲಿ ದಿನ ದಿನ ಹೂಗಳು

**ನಿಸರ್ಗ ಸಂಪದ ಭಾಗ 2 –ಯೂಟ್ಯೂಬ್ ಪರಿಸರ ಗೀತೆಗಳು**

ಬನದಲಿ ದಿನ ದಿನಾ ಬಣ್ಣದ ಹೂಗಳು
ನಿನ್ನಯ ಚೆಲುವನು ಸಾರುತಿದೆ ।
ಕೋಗಿಲೆ ಗಿಳಿಗಳು ನಿನ್ನಿನ ಕೊರಳಿನ
ಇಂಪಿನ ದನಿಯನು ಬೀರುತಿದೆ ॥
ಕೂಹೂ ಕೂಹೂ॥

ಬೀರುವ ಕಂಪಿನ ತಣ್ಣನೆ ಗಾಳಿಯು
ನಿನ್ನಸುರಿನೊಲ್ಮೆಯ ತೋರುತಿದೆ।
ನಳನಳಿಸುತಿದೆ ಯುವ ಮಿಳಿ ಮಿಳಿ ತಳಿರು
ನಿನ್ನೊಡಲ ಅಂದವ ಮೆರೆಯುವದೇ ॥1॥

ಗಾಳಿಗೆ ಬಳಕುವ ತೆಳ್ಳನೆ ಬಳ್ಳಿ
ನಿನ್ನ ಹಸಿರನೊಡಲನು ಜರಿಯುವದೇ
ವನದಲಿ ತುಳುಕುವ ತಿಳಿಗೊಳವಾದರು
ಕಣ್ಣನು ಸರಸಕೆ ಕರೆಯುವದೇ ॥2॥

ಬನದೊಳು ನೀನು ನಿನ್ನೊಳು ನಾನು
ನಾನು ನೀನು ಬನದೊಳಗೋ
ಬನವು ನೀನು ಕನವರಿಸುವ ನಾನು
ಎಲ್ಲರೂ ಎನ್ನಯ ಮನದೊಳಗೊ ॥3॥



# ವನರಾಗ ಸಂಗಮ

**ಪರಿಸರ ಗೀತೆಗಳ ಸಂಗ್ರಹ**



**ಸಂಗ್ರಹ**
**ಕು. ಸ್ವಾತಿ ನಾಗರಾಜ ನಾಯ್ಕ, ಶಿರಸಿ**

**ಮಾರ್ಗದರ್ಶನ : ಉಮಾಪತಿ ಭಟ್ಟ ಕೆವಿ**

**ಪ್ರಕಾಶಕರು :**
**ಯೂತ್ ಫಾರ್ ಸೇವಾ ಬೆಂಗಳೂರು**
**ಜ್ಞಾನಗಿರಿ 75/76 ಸೌದಾಮಿನಿ ಲೇ ಔಟ್**
**ಕೋಣನಕುಂಟೆ, ಬೆಂಗಳೂರು**
**ಮೊ: 9380866154**

**ವನರಾಗ ಸಂಗಮ**
ಪರಿಸರ ಗೀತೆಗಳ ಸಂಗ್ರಹ

ಪ್ರಕಾಶಕರು : ಯೂತ್ ಫಾರ್ ಸೇವಾ ಬೆಂಗಳೂರು
ಜ್ಞಾನಗಿರಿ 75/76
ಸೌದಾಮಿನಿ ಲೇ ಔಟ್
ಕೋಣನಕುಂಟೆ, ಬೆಂಗಳೂರು

ಹಕ್ಕುಗಳು : ಪ್ರಕಾಶಕರದ್ದು.

ಪುಟಗಳು : 56 + 4 = 60 (ರಕ್ಷಾಪುಟ ಸಹಿತ)

ಪುಸ್ತಕದ ಆಕಾರ : 1/8 ಕ್ರೌನ್

ಮುದ್ರಕರು : ಚಿತ್ರಲೇಖಾ ಮುದ್ರಣ,
ಹೊಸಪೇಟೆ ರಸ್ತೆ, ಶಿರಸಿ
ಮೊಬೈಲ್: 9945397760

**ಯೂತ್ ಫಾರ್ ಸೇವಾ**
ಜ್ಞಾನಗಿರಿ, #75/76, 4ನೇ ಕ್ರಾಸ್, 2ನೇ ಮುಖ್ಯ ರಸ್ತೆ, ಸೌದಾಮಿನಿ ಲೇಔಟ್, ಕೋಣನಕುಂಟೆ
ಬೆಂಗಳೂರು – 62, www.youthforseva.org.

Youth *for* seva
experience the joy of giving



## 103 ಹಸಿರು ವನದ ಸಂಪಿಗೆ ಸಹ್ಯಾದ್ರಿಯ ಸೊಂಪಿಗೆ

**–ವನಸಿರಿ ಪರಿಸರ ಗೀತೆಗಳು ಭಾಗ ಎ ಕೃಪೆ ಯುಟ್ಯೂಬ್**

ಹಸಿರು ವನದ ಸಂಪಿಗೆ ಸಹ್ಯಾದ್ರಿಯ ಸೊಂಪಿಗೆ
ಇಡದಿರಿ ಕೊಡಲಿ ಇಡದಿರಿ ॥
ನದಿನದಗಳ ಮೂಲಕೆ ಜನಜೀವನ ಸ್ರೋತಕೆ
ಕೊಡದಿರಿ ಕಿಚ್ಚು ಕೊಡದಿರಿ ॥1॥

ಮಳೆಯ ತರುವ ತರುಗಳು ಮುಗಿಲ ಕರೆಯುವ ಕೈಗಳು
ಬೇಡಿರೋ ಕಡಿಯಬೇಡಿರೋ ॥2॥

ಇಂದು ಕಾಡು ಹೋದರೆ ನಾಳೆ ಬಾಳು ಅರೆಬರೇ
ಆಸರೆಯ ಕೊಲ್ಲ ಬೇಡಿರೋ ॥3॥

ನಡೆದುಬನ್ನಿ ಮುಂದಕೆ ತಡೆಯಬನ್ನಿ ಕಟುಕರ
ಕಹಳೆಯೂದಿ ಎಚ್ಚರಿಕೆಯ ॥4॥

ನರಜಾತಿಯ ಉಳಿವಿಗೆ ಸುಖ ಶಾಂತಿಯ ಬದುಕಿಗೆ
ಉಳಿಸಿರಿ ಕಾಡ ಬೆಳೆಸಿರಿ ॥5॥

**(1987ರಲ್ಲಿ ಪಶ್ಚಿಮಘಟ್ಟ ಉಳಿಸಿ ಯಾತ್ರೆಯಲ್ಲಿ ಹಾಡಿದ ಹಾಡು)**

ದೇವರ ಕಾಡಿದು ದೇವರ ನಾಡಿದು ದೇವರ ಮಕ್ಕಳ ತರಿಯದಿರಿ
ದೇವರ ದಾರಿಯ ನಡೆನುಡಿಯರಿತು
ಮಾನವರಾಗಿಯೇ ಮೆರೆಯುತಿರಿ ॥6॥

ಪಶ್ಚಿಮ ಘಟ್ಟದ ಬೆಟ್ಟಗಳೊಟ್ಟಿನ ನಿಸರ್ಗ ಸಗ್ಗವನುಳಿಸೋಣ
ನಿಸರ್ಗವುಳಿಸಿ ಆಗ್ರಹವಳಿಸಿ ಪ್ರಶಾಂತ ಜೀವನಕೆಳೆಸೋಣ ॥7॥

**(1987ರಲ್ಲಿ ಪಶ್ಚಿಮಘಟ್ಟ ಉಳಿಸಿ ಯಾತ್ರೆಯಲ್ಲಿ ಹಾಡಿದ ಹಾಡು)**

## 102 ಎಲ್ಲಿ ಮಣ್ಣು ಎಲ್ಲಿ ನೀರು ಹುಡುಕುತಿಹುದು ತಾಯಿ ಬೇರು


**–ವನಸಿರಿ ಪರಿಸರ ಗೀತೆಗಳು ಭಾಗ ಎ ಕೃಪೆ ಯುಟ್ಯೂಬ್**

ಎಲ್ಲಿ ಮಣ್ಣು ಎಲ್ಲಿ ನೀರು ಹುಡುಕುತಿಹುದು ತಾಯಿ ಬೇರು
ಆಹಾ ಎಂತ ದಾಹ ಬೇರಿಗೆ ಬರುವರಾರು ದಾರಿಗೆ ಬರುವರಾರು
ದಾರಿಗೆ ॥ಪ॥
ಎಲೆಗಳಲ್ಲಿ ಸೂರ್ಯಕಿರಣ ತಣಿಯುವದೋ ಪ್ರಪಂಚ ಪ್ರಾಣ
ಹಸಿರೇ ಉಸಿರು ಕಾರಣ ನಮ್ಮ ಉಸಿರು ಕಾರಣ ॥1॥

ಬೇರು ಕುಡಿದ ನೀರಿನಿಂದ ಮೂರು ಲೋಕ ತಣಿಯುವದಲ್ಲ
ಮನವ ನೊಂದು ದಾಹದಿಂದ ಪರಿಸರವೇ ಸುಡುವದಲ್ಲ
ಅಯ್ಯೋ ಏನು ದಾಹ ಮನುಜಗೆ
ಬೆಳಕದಾರುದಾರಿಗೆ ಬೆಳಕದಾರು ದಾರಿಗೆ ॥2॥

**(1987ರಲ್ಲಿ ಪಶ್ಚಿಮ ಘಟ್ಟ ಉಳಿಸಿ ಯಾತ್ರೆಯಲ್ಲಿ ಹಾಡಿದ ಹಾಡು)**





## ಮುನ್ನುಡಿ

ಸೃಷ್ಟಿಯ ರಹಸ್ಯವನ್ನು ಸಂಪೂರ್ಣವಾಗಿ ತಿಳಿಯಬೇಕೆಂಬ ಕುತೂಹಲ ಅನಾದಿಕಾಲದಿಂದಲೂ ಮನುಷ್ಯನ ಸ್ವಭಾವದಲ್ಲಿದೆ. ಪ್ರಕೃತಿಯನ್ನು ಒಡೆದು, ಹರಿದು ಪುಡಿಪುಡಿ ಮಾಡಿ ಅನ್ವೇಷಿಸುವುದು ವಿಜ್ಞಾನದ ವಿಧಾನ. ಪ್ರಕೃತಿಯನ್ನು ಪ್ರೀತಿಸಿ ಒಲಿಸಿಕೊಂಡು ಸತ್ಯಾನ್ವೇಷಣೆ ಮಾಡುವುದು ಕವಿಗಳ, ಸಂತರ ಮಾರ್ಗ. ಪ್ರಕೃತಿ ತನ್ನ ಪೂರ್ಣಸ್ವರೂಪವನ್ನು ತೆರೆದಿಡುವುದು ಪ್ರೀತಿಯಿಂದ ಬಂದವರೆದುರಷ್ಟೇ.

ಒಡೆದು ನೋಡುವ ವೈಜ್ಞಾನಿಕ ವಿಧಾನವನ್ನಷ್ಟೇ ಬೋಧಿಸುವ ಶಾಲಾ ತರಗತಿಗಳಿಗೆ ಪ್ರೀತಿಯಿಂದ ಪ್ರಕೃತಿ ಅರಿಯುವ ಕವಿಮಾರ್ಗ 'Out of syllabus' ಆಗಿದೆ. ಅದರ ಪರಿಣಾಮವೇ ಪ್ರಕೃತಿಯಲ್ಲಿ, ಸಮೂಹ ಜೀವನದಲ್ಲಿ ಹಾಗೂ ವ್ಯಕ್ತಿಗತ ಜೀವನದಲ್ಲಿ ಕಾಣಬರುವ ಅಸಂತುಲತೆ ಇದರ ವ್ಯಕ್ತ ರೂಪವೇ ಪರಿಸರ ನಾಶ ಹಾಗೂ ಕದಡಿದ ಮನಸ್ಸುಗಳು.

ಭಾಷಣ ಕೇವಲ ಬುದ್ಧಿಯನ್ನು ಪ್ರೇರೇಪಿಸುತ್ತದೆ. ಕವನ ಭಾವನೆಗಳನ್ನು ಅರಳಿಸುತ್ತದೆ. ಪ್ರಕೃತಿಯ ಜೊತೆ ಜೀವಂತ ಸಂಬಂಧ

ಬೆಳೆಸುತ್ತದೆ. ಪ್ರೀತಿಯ ಸಂಬಂಧದಿಂದಲೇ ಪ್ರಕೃತಿಯ ರಕ್ಷಣೆ, ಪೋಷಣೆ ಸಾಧ್ಯ. ಕವನ ಕಲಿಯುವದು ಸುಲಭ. ಹಾಡುತ್ತಾ ಹಾಡುತ್ತಾ ಮನದಾಳಕ್ಕಿಳಿಸುವ ಶಕ್ತಿ ಹಾಡಿಗಿದೆ.

ಈ ದಿಕ್ಕಿನಲ್ಲಿ ಉಮಾಪತಿ ಭಟ್ಟರ ಪ್ರಯತ್ನ ಅತ್ಯಂತ ಸಮಾಜದ ಮತ್ತು ಅನುಕರಣೀಯ. ಅನೇಕ ವರ್ಷಗಳಿಂದ ಪಾರಂಪರಿಕ ವನಗಳ ನಿರ್ಮಾಣ, ಹಸಿರು ಆರೋಗ್ಯದ ಕುರಿತು ಕಾರ್ಯಾಗಾರ, ಧಾರ್ಮಿಕ ಸಂದರ್ಭಗಳಲ್ಲಿ ಉಪಯೋಗಿಸುವ ಪತ್ರ-ಪುಷ್ಪಗಳ, ಫಲವೃಕ್ಷಗಳ ಬಗ್ಗೆ ಕಾರ್ಯಾಗಾರ, ಇನ್ನೂ ಹಲವು ಆಯಾಮಗಳಲ್ಲಿ ಪರಿಸರ ಕಾರ್ಯಗಳಲ್ಲಿ ತೊಡಗಿರುವ ಭಟ್ಟರ 'ಪರಿಸರ ಗೀತೆಗಳ ಸಂಕಲನ' "ವನರಾಗ ಸಂಗಮ" ಪುಸ್ತಕ ಬಹುಜನರ ಕೈಸೇರಿ ಪ್ರೇರಕ ಶಕ್ತಿಯಾಗಲಿ ಎಂದು ಶುಭ ಹಾರೈಸುವೆ.

**– ಶ್ರೀ ವೆಂಕಟೇಶಮೂರ್ತಿ**
ಸಂಸ್ಥಾಪಕರು ಮತ್ತು ಮುಖ್ಯ ಮಾರ್ಗದರ್ಶಕರು
ಯೂತ್ ಫಾರ್ ಸೇವಾ, ಬೆಂಗಳೂರು



## 101 ಪಶ್ಚಿಮ ಘಟ್ಟದ ಬೆಟ್ಟದ ದಟ್ಟದ ಮರಗಳ ಉಳಿಸಲು ನಡೆನಡೆವಾ

**–ವನಸಿರಿ ಪರಿಸರ ಗೀತೆಗಳು ಭಾಗ ಎ – ಕೃಪೆ ಯುಟ್ಯೂಬ್**

ಪಶ್ಚಿಮ ಘಟ್ಟದ ಬೆಟ್ಟದ ದಟ್ಟದ ಮರಗಳನುಳಿಸಲು ನಡೆನಡೆವಾ
ಧ್ವನಿ ಎತ್ತರದಲಿ ಮನದೊತ್ತರದುಲಿ
ಮಾನವ ಕೋಟಿಗೆ ಕರೆಕೊಡುವಾ ॥ಪ॥
ಮರವಿರೆ ಮಾನವ ಕಡಿವವ ದಾನವ ಉಳಿವಿನ ಕಾಳಗ ಘೋಷಿಸುವ
ಮರವನ್ನುಳಿಸುವ ಮಾರ್ಗವನರಸುವಾ
ನಾವು ಒಟ್ಟಾಗುವ ಧ್ವನಿ ತೆರೆವಾ॥1॥

ಮರನ್ನಿರಿಸುವ ಮರನ್ನುಳಿಸುವ ಮರಗಳನಾದರಿಸುತ ಬೆಳೆವ
ಮರದಿಂದಲೇ ತನು ಮರದಿಂದಲೇ ಮನ
ಮರವೇ ಮಾನವನನುಭಾವ ॥2॥

ಮರವುಳಿದರೆ ಮಳೆ ಮರವುಳಿದರೆ ಹೊಳೆ ಮರವುಳಿದರಳಲು
ಹೊಲವೆಲ್ಲಾ ಬೆಳೆ ಮರವಿದ್ದರೆ ಮೃಗ
ಮರವಿದ್ದರೆ ಖಗ ಮರವಿದ್ದರೆ ಇದೆ ಜೀವಜಗ ॥3॥

ಉಳಿಸುವ ಬೆಳೆಸುವ ನಡೆಬೇಕು ಬಳಸಿಯೂ ಉಳಿಸಲು ನೆಡಬೇಕು
ಜಗವುಳಿಯಲು ಈ ನಡೆಬೇಕು
ಜಗವುಳಿಯಲು ಗಿಡ ನೆಡಬೇಕು ॥4॥

ಕಡಿದು ಕಡಿದು ಕಾನನ ಬರಿದು ನೆಲ ಜಲ ಗಾಳಿಗೆ ನೆಲೆಯಿರದು
ಹಸಿರುಳಿದು ಜಗದುಸಿರಾಗಲಿ ಕಾನನ ಉಳಿಸುವ ಛಲವಿರಲಿ ॥5॥

ಗೆಲುವೈಯ ಗೆಲುವೋ ತಾನಿ ತಂದಾನ
ಹಸಿರೀನ ಸಿರಿಯೇ ಕೋಲಣ್ಣ ಕೋಲೆ ॥ಪ॥

ಎಲ್ಲ ನೆಟ್ಟು ಗೆಲ್ಲತೀವಿ ಘಟ್ಟಕಾಡ ಉಳಸತೀವಿ
ಘಟ್ಟ ಬೆಟ್ಟ ಮುಟ್ಟತೀವಿ ಮತ್ತೆ ಮತ್ತೆ ಹುಟ್ಟತೀವಿ
ಗೆಲುವೈಯ ಗೆಲುವೋ ತಾನಿ ತಂದಾನ
ಹಸಿರೀನ ಸಿರಿಯೇ ಕೋಲಣ್ಣ ಕೋಲೆ ॥1॥

ಕಾಡೇ ಉಸಿರ ಬಟ್ಟಲಣ್ಣ ಪ್ರಗತಿಯೊಂದು ಮೆಟ್ಟಿಲಣ್ಣ
ಕಾಡೇ ನಮ್ಮ ಮಕ್ಕಳ ತೂಗುವಂದ ತೊಟ್ಟಿಲಣ್ಣ
ಗೆಲುವೈಯ ಗೆಲುವೋ ತಾನಿ ತಂದಾನ
ಹಸಿರೀನ ಸಿರಿಯೇ ಕೋಲಣ್ಣ ಕೋಲೆ ॥2॥

ಮರಗಳ್ಳರ ಅಡಗಿಸಯ್ಯ ಕೊಡಲಿಯನ್ನು ಮಡಗಿಸಯ್ಯ
ಎದೆಯ ಕಹಿಯ ಗುಡಿಸರಯ್ಯಾ
ಗೆಲುವೈಯ ಗೆಲುವೋ ತಾನಿ ತಂದಾನ
ಹಸಿರಿನ ಸಿರಿಯೇ ಕೋಲಣ್ಣ ಕೋಲೆ ॥3॥

ಪಶ್ಚಿಮಕ್ಕೆ ಘಟ್ಟವುಂಟು ಮೋಡ ತಡೆವ ಗೋಡೆಯುಂಟು
ಹಳ್ಳ ಹೊಳೆಗಳ ವರತೆಯುಂಟು
ಗೆಲುವೈಯ ಗೆಲುವೋ ತಾನಿ ತಂದಾನ
ಹಸಿರೀನ ಸಿರಿಯೇ ಕೋಲಣ್ಣ ಕೋಲೆ ॥4॥

ಕಲ್ಪವೃಕ್ಷ ನೆಟ್ಟವಗೆ ಅಲ್ಪ ತರವದಿಲ್ಲವಮ್ಮ
ಅರಳಿ ಗೆಲ್ಲ ಊರಿದವಗೆ ಕೆಲವೆ ಅರಳಿ ಬರುವದಮ್ಮ
ಗೆಲುವೈಯ ಗೆಲುವೋ ತಾನಿ ತಂದಾನ
ಹಸಿರೀನ ಸಿರಿಯೇ ಕೋಲಣ್ಣ ಕೋಲೆ ॥5॥

**(1987ರಲ್ಲಿ ಪಶ್ಚಿಮ ಘಟ್ಟಉಳಿಸಿ ಯಾತ್ರೆಯಲ್ಲಿ ಹಾಡಿದ ಹಾಡು)**



# ನಮ್ಮ ಮಾತು

ಭಾರತ ದೇಶವು ನೈಸರ್ಗಿಕ ಸಂಪತ್ತಿನ ಅತ್ಯಂತ ಸಮೃದ್ಧ ಪ್ರದೇಶವಾಗಿದ್ದು ಅತಿ ವಿಶಿಷ್ಟವಾದ ಹಾಗೂ ಉಪಯೋಗವುಳ್ಳ ಪ್ರಾಣಿ ಮತ್ತು ಸಸ್ಯ ಸಂಕುಲವನ್ನು ಹೊಂದಿದೆ. ನಮ್ಮ ದೇಶದಲ್ಲಿ 40 ಸಾವಿರಕ್ಕೂ ಹೆಚ್ಚು ಸಸ್ಯ ಪ್ರಭೇದಗಳಿದ್ದು. ಅತಿ ಹೆಚ್ಚಿನ ಜೀವ ವೈವಿಧ್ಯತೆಯುಳ್ಳ ರಾಷ್ಟ್ರವಾಗಿದೆ.

ಜೀವನದ ಪ್ರತಿ ಕ್ಷಣದಲ್ಲೂ ಪ್ರಕೃತಿಯ ಜೊತೆಯಲ್ಲಿರುತ್ತೇವೆ. ನಿಸರ್ಗವಿಲ್ಲದೇ ಮಾನವನ ಬದುಕಿಲ್ಲ. ಕೃಷಿ, ಮನೆಮದ್ದು, ಅಡುಗೆ ಮನೆ, ಪಶುಪಾಲನೆ, ಮನೆ ನಿರ್ಮಾಣ ಎಲ್ಲವಕ್ಕೂ ಗಿಡ ಮರ ಜೀವ ವೈವಿಧ್ಯಗಳ ಆಸರೆ ಬೇಕು. ಗೃಹ ಬಳಕೆ, ಕೈಗಾರಿಕೆ, ಔಷಧ, ಸಂಗೀತ ಮುಂತಾದ ಕ್ಷೇತ್ರಗಳಲ್ಲೂ ನಮಗೆ ಅವಶ್ಯವಾದ ಎಲ್ಲವನ್ನು ಈ ಪರಿಸರದಿಂದಲೇ ಪಡೆಯುತ್ತಾ ಬಂದಿದ್ದೇವೆ.

ಸ್ವಾರ್ಥ ಲಾಲಸೆಯಿಂದಾಗಿ ಅತಿಯಾದ ಪ್ರಕೃತಿಯ ಬಳಕೆಯ ಪರಿಣಾಮದಿಂದ ಅನಾವೃಷ್ಟಿ, ತಾಪಮಾನ ಹೆಚ್ಚಳ, ಹೊಸಹೊಸ ಕಾಯಿಲೆಗಳು, ಹವಾಮಾನ ವೈಪರೀತ್ಯ, ನದಿ ಸಾಗರಗಳ ಮಾಲಿನ್ಯತೆ, ಅಂತರ್ಜಲ ಕುಸಿತ ಇವೆಲ್ಲಕ್ಕೂ ಕಾರಣವಾಗಿದೆ. ಜೀವ ವೈವಿಧ್ಯದ ಮತ್ತು ಅರಣ್ಯದ ನಿರಂತರ ನಾಶದಿಂದಾಗಿ ಇಡೀ ಜಗತ್ತು ದೊಡ್ಡ ಸಂಕಷ್ಟಕ್ಕೆ ಹೊರಳುತ್ತಿದೆ.

ಭವಿಷ್ಯದ ದೃಷ್ಟಿಯಿಂದ ಪರಿಸರದ ಸಂರಕ್ಷಣೆ ನಮ್ಮೆಲ್ಲರ ಹೊಣೆಗಾರಿಕೆ ಎಂಬ ಅರಿವು ಮೂಡಿಸಲು ಇದೊಂದು ಚಿಕ್ಕ ಪ್ರಯತ್ನ. ಹಾಡುಗಳ ಮೂಲಕ ಜನರಲ್ಲಿ ಪ್ರಕೃತಿಗೂ ನಮಗೂ ಭಾವನಾತ್ಮಕ ಸಂಬಂಧ ಬೆಳೆಸುವುದು ಮತ್ತು ಸಂಗೀತ ಕ್ಷೇತ್ರಕ್ಕೆ ಇರುವ ವನ ಸಂವೇದನೆಯನ್ನು ಪ್ರಚುರ ಪಡಿಸುವುದು ಆಗಿದೆ. ತನ್ಮೂಲಕ ಪರಿಸರ

ಜಾಗೃತಿ ಮೂಡಿಸುವ ಆಶಯ ನಮ್ಮದಾಗಿದೆ. ಅದಕ್ಕಾಗಿ – ಈ **'ವನರಾಗ ಸಂಗಮ'** 100 ಪರಿಸರ ಗೀತೆಗಳ ಸಂಗ್ರಹ ಪುಸ್ತಕ ಪ್ರಕಟಿಸಲು ಸಂತಸವಾಗುತ್ತಿದೆ. ಯೂತ್ ಫಾರ್ ಸೇವಾ ಸಂಸ್ಥೆಯು ಈ ಸದವಕಾಶ ಒದಗಿಸಿದೆ.

ಯೂತ್ ಫಾರ್ ಸೇವಾ ಸಂಸ್ಥಾಪಕರಾದ ಶ್ರೀ ವೆಂಕಟೇಶ ಮೂರ್ತಿಯವರ ಪ್ರೇರಣೆಯಿಂದ ಕಾರ್ಯ ಆರಂಭಗೊಂಡಿದೆ ಈ ಕೃತಿಗೆ ಮುನ್ನುಡಿ ಬರೆದು ಕೊಟ್ಟ ಅವರನ್ನು ಸದಾ ಸ್ಮರಿಸುವೆ. ಸದಾ ಪರಿಸರ ಕ್ಷೇತ್ರದ ನಮ್ಮ ಪರಿಸರ ಕಾರ್ಯಗಳಿಗೆ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸುತ್ತಿರುವ ಹಾಗೂ ಈ ಪುಸ್ತಕಕ್ಕೆ ಬೆನ್ನುಡಿ ಬರೆದ ಯೂತ್ ಫಾರ್ ಸೇವಾ ಶ್ರೀ ಭಾಸ್ಕರ ಕೇಶವಮೂರ್ತಿ ಅವರಿಗೆ ನನ್ನ ಹೃದಯ ಪೂರ್ವಕ ಕೃತಜ್ಞತೆಗಳು.

ಈ ಕೃತಿಗೆ ಹಾಡುಗಳನ್ನು ಬರೆದುಕೊಟ್ಟ ಹಾಗೂ ಸಂಗ್ರಹಿಸಿದ ಯೂತ್ ಫಾರ್ ಸೇವಾ ಸ್ವಯಂಸೇವಕರಾದ ಕುಮಾರಿ ಸ್ವಾತಿ ನಾಯ್ಕ ಮತ್ತು ಶ್ರೀಧರ ಭಟ್ಟ ಶಿರಸಿ ನಮ್ಮ ಕೃತಜ್ಞತೆಗಳು. ಕಾಲಕಾಲಕ್ಕೆ ಮಾರ್ಗದರ್ಶನ ಮಾಡಿದ ಜನಮಾಧ್ಯಮ ಪತ್ರಿಕೆ ಸಂಪಾದಕರಾದ ಶ್ರೀ ಅಶೋಕ ಹಾಸ್ಯಗಾರ, ಯೂತ್ ಫಾರ್ ಸೇವಾ ಶಿರಸಿ ಪರಿಸರ ವಿಭಾಗದ ಸಲಹಾ ಸಮಿತಿಯ ಎಲ್ಲ ಸದಸ್ಯರಿಗೂ, ಅಚ್ಚುಕಟ್ಟಾಗಿ ಮುದ್ರಣ ಮಾಡಿಕೊಟ್ಟ ಚಿತ್ರಲೇಖಾ ಮುದ್ರಣ ಶ್ರೀ ಅನಂತ ಭಟ್ಟ ಮತ್ತು ಅವರ ಸಿಬ್ಬಂದಿಗಳಿಗೂ ನಮ್ಮ ಕೃತಜ್ಞತೆಗಳು.

**ಉಮಾಪತಿ ಭಟ್ಟ ಕೆವಿ**
ಸಂಯೋಜಕರು, ಪರಿಸರ ವಿಭಾಗ
ಯೂತ್ ಫಾರ್ ಸೇವಾ, ಬೆಂಗಳೂರು

ಶುಭಕೃತ್ ಸಂ/ದ
ಕಾರ್ತೀಕ ಶುಕ್ಲ ಪಾಡ್ಯ
10–11–2022



## 99. ಈ ನೆಲ ಈ ಜಲ ಈ ಕಾಡು

**– ಸಂಗ್ರಹ: ಸಂಜನಾ ರವೀಂದ್ರ ಪೋತದಾರ**

ಈ ನೆಲ ಈ ಜಲ ಈ ಕಾಡು ಗೀಜಗ ಕಟ್ಟಿದ ಈ ಗೂಡು
ಇರಲಿ ಇರಲಿ ಹೀಗೆ ಪ್ರಕೃತಿ ಕೊಟ್ಟ ಕೊಡುಗೆ ॥ಪ॥

ಜುಳು ಜುಳು ಹರಿವ ಹೊಳೆಗೆ
ಕೊಳೆಯ ಬೆರೆಸೊ ಖಳರೇ
ಬಗೆ ಬಗೆಯ ಹೊಗೆಯನು ಉಗುಳಿ
ಮಲಿನ ಗೊಳಿಸದಿರಿ ಗಾಳಿ
ಸಾಕು ಇನ್ನೂ ಸಾಕು ಈ ತಪ್ಪು ತಿಳಿಯಬೇಕು ॥1॥

ಮರಗಳ ಕಡಿದು ಕಡಿದು ಎಲ್ಲಡೆ ಬಣ ಬಣ ಬಿಸಿಲು
ಚಿಲಿಪಿಲಿ ಉಲಿವ ಹಕ್ಕಿ ಅಳುತಿದೆ ಬಿಕ್ಕಿಬಿಕ್ಕಿ
ಸಾಕು ಇನ್ನೂ ಸಾಕು ಹಸಿರಾಗಬೇಕು ಬದುಕು ॥2॥

ರಕ್ಷಿಸಬೇಕು ಬಿಡದೇ ನೆಲ ಜಲಗಳನು ನಾವು
ನಾಡಿನ ಪೀಳಿಗೆಗಾಗಿ ಉಳಿಸಿರಿ ನಾಡಿನ ಚೆಲುವು
ಬೇಕು ಇನ್ನೂ ಬೇಕು ಹಸನಾಗಬೇಕು ಬದುಕು ॥3॥

## 100. ಗೆಲುವೈಯ ಗೆಲುವೋ ತಾನಿ ತಂದಾನ

**–ವನಸಿರಿ ಪರಿಸರ ಗೀತೆಗಳು ಭಾಗ ಎ**

**– ಕೃಪೆ ಯುಟ್ಯೂಬ್**

ಗೆಲುವೈಯ ಗೆಲುವೋ ತಾನಿ ತಂದಾನ
ಹಸುರೀನ ಸಿರಿಯೇ ಕೋಲಣ್ಣ ಕೋಲೆ ॥ಪ॥

ಗರುಡ ಮೇಲೆ ತುಳಿಯಿತಣ್ಣ ಬೇರು ಅಲ್ಲಾಡಿತಣ್ಣ
ಗೆಳೆಯರೆಲ್ಲ ಎಳೆಯಿರಣ್ಣ ಪಶ್ಚಿಮಕ್ಕೆ ಘಟ್ಟವಣ್ಣ

ಅಲ್ಪ ಶ್ರಮದಲಿ ಅಧಿಕ ಫಲವ ಕೊಡುತಿಹ ನಾಡು
ಕಲ್ಪನೆಗೆ ನಿಲುಕದಿಹ ಸೃಷ್ಟಿ ಸೊಬಗಿದೆ ನೋಡು ॥4॥

ತಿಂದು ತೀರದ ಹಲಸು ನಿಂಬೆ ಬಾಳೆಯು ಗೆಣಸು
ಅಂದವಾಗಿಹೆ ಬೆಳೆಸು ತುಂಬಿರುವ ಸಿರಿನಾಡು ॥5॥

ಅಲ್ಲಿಗಲ್ಲಿಗೆ ದೇವ ಮಂದಿರವು ಶೋಭಿಪಿದು
ಅಲ್ಲಿಗಲ್ಲಿಗೆ ಪುಣ್ಯ ನದಿಯು ಹರಿದಿಹ ನಾಡು ॥6॥

## 98. ಬಾನಂಗಣದಲಿ ಕಂಕಣ ಕಟ್ಟಿದೆ

**– ಸಂಗ್ರಹ ಪ್ರಜ್ಞಾ ಹೆಗಡೆ ಶಿರಸಿ**

ಬಾನಂಗಣದಲಿ ಕಂಕಣ ಕಟ್ಟಿದೆ
ಚಂದಿರ ರೋಹಿಣಿಯರ ಬಳಸಿ
ಕಿರು ಮೋಡವು ಹೆಡೆಯಾಡಿಸಿ
ನಲಿದಿದೆ ಗಾಳಿಯ ಕೊಂಗೆಯನನುಸರಿಸಿ ॥ಪ॥

ಅಲ್ಲಿದಿಲ್ಲಿಂಗೆ ಸಾವಿರ ಮಲ್ಲಿಗೆ
ಚಿಟ್ಟೆಯ ಸೇತುವೆ ತೂಗಿಹುದು
ಇರುಳಿನ ಹೆಜ್ಜೆಯ ಗೆಜ್ಜೆಯ ಮೆಲ್ಲುಲಿ
ಗಿರಿವನ ಕೊಳದಲಿ ಸುಳಿದಿಹುದು ॥1॥

ಈ ಬೆಳುದಿಂಗಳ ಇಂಗಡಲಾಳದಿ
ಕಂಗಳ ಮೇಂಗಳ ತೆರೆಯೇ ಸಖೀ
ಸೃಷ್ಟಿಯ ಸೌಂದರ್ಯೋಪಾಸನೆಯಲಿ
ನೀ ಜೊತೆಗಿರೆ ನಾ ಪರಮಸುಖಿ ॥2॥



## ಪರಿವಿಡಿ


| ಅ.ನಂ | ಕವನದ ಹೆಸರು | ಪುಟ |
|---|---|---|
| 1 | ಈ ನೆಲ ಈ ಜಲ ಈ ಮಣ್ಣು ನಮ್ಮದು | 11 |
| 2. | ಪ್ರಕೃತಿ ಪೂಜೆಗೆ ಹೊರಟು ಬನ್ನಿರಿ | 12 |
| 3. | ದೇಶ ದೇಶ ದೇಶ ದೇಶ ನನ್ನದು | 13 |
| 4. | ಭೋರೆಂದು ಸುರಿದು, ಸುಧೆಯಾಗಿ ಹರಿದು | 14 |
| 5. | ಹನಿ ಹನಿ ನೀರು ತಾನು ಅಮೂಲ್ಯ | 15 |
| 6. | ಜೇನು ನಮ್ಮ ಒಡನಾಡಿ | 16 |
| 7. | ಹಾಡ ಕಟ್ಟಿ ನವನಾಡ ಕಟ್ಟಿ | 17 |
| 8. | ಸ್ವರ ವನ | 18 |
| 9. | ನದಿ | 19 |
| 10. | ಈ ಮಣ್ಣು ನಮ್ಮದು | 20 |
| 11. | ಸೃಷ್ಟಿ ಚೆಲುವು | 21 |
| 12. | ಹರಿವ ತೊರೆ ತೀರದಲಿ | 22 |
| 13. | ಕಡಿಯ ಬೇಡಿರಣ್ಣ ಮರವ | 23 |
| 14. | ಬನಸಿರಿ | 24 |
| 15. | ನಿಲ್ಲಿ ಮೋಡಗಳೆ | 25 |
| 16. | ಮುಂಗಾರಿನ ಅಭಿಷೇಕ | 26 |
| 17. | ಹಸಿರು ಪಯಣ | 27 |
| 18. | ಕೊಡಗಿನ ಕಾವೇರಿ | 28 |
| 19. | ಈ ಹಸಿರು ಸಿರಿಯಲಿ | 29 |
| 20. | ನಿತ್ಯೋತ್ಸವ... | 30 |
| 21. | ವನದೇವತೆ ಪೂಜೆಗೆ | 31 |
| 22. | ಮಣ್ಣಿಂದ ಕಾಯ ಮಣ್ಣಿಂದ | 32 |
| 23. | ಮಳೆಯ ದಯ ಮಾಡೋ | 33 |
| 24. | ನದನದಿಗಳ ಗಿರಿವನಗಳ ತಾಯೆ... | 34 |
| 25. | ವನಸುಮ | 35 |

| ಅ.ನಂ | ಕವನದ ಹೆಸರು | ಪುಟ |
|---|---|---|
| 26. | ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ | 36 |
| 27. | ಪರಿಸರವ ಉಳಿಸೋಣ ಬನ್ನಿರೋ | 37 |
| 28. | ವಸುಂಧರೆಯ ಪೂಜಿಸೋಣ ಬನ್ನಿ | 38 |
| 29. | ಭೂ ವನದ ಮಧುಗಂಗೆ ನನ್ನೆಡೆಗೆ ಬಾ | 39 |
| 30. | ಪ್ರಕೃತಿ ಮಾತೆಯೇ ಸುಂದರ | 40 |
| 31. | ಹಕ್ಕಿಯ ಹಾಡಿಗೆ ತಲೆದೂಗುವ ಹೂ.. | 41 |
| 32. | ವರ್ಷಧಾರೆ | 42 |
| 33. | ಯಾವ ನೆಲದ ಗಂಧ ಗಾಳಿ | 42 |
| 34 | ಆಹಾ ಸೊಬಗು ವರ್ಷಧಾರೆ | 43 |
| 35. | ಪರ್ಯಾವರಣ | 44 |
| 36. | ಮುಂಗಾರಿನ ಸಿಂಗಾರ | 45 |
| 37. | ಇಳಿದು ಬಾ ತಾಯಿ... | 46 |
| 38 | ಪಾತರಗಿತ್ತೀ ಪಕ್ಕಾ. | 47 |
| 39 | ಪಶ್ಚಿಮ ಕಾನನ ನಯನ ಮನೋಹರ | 48 |
| 40 | ಮನೆಮದ್ದಿನ ಲಾವಣಿ | 49 |
| 41. | ಜೀವನ ಸೃಷ್ಟಿಯ ಸಂಕಲನ | 51 |
| 42. | ಮಳೆಕೊಯ್ಲು ಮಾಡೋಣ | 52 |
| 43. | ಬೆಳ್ಳಕ್ಕಿಗಳು | 53 |
| 44. | ಗಿಡನೆಡಿ ಗಿಡನೆಡಿ | 54 |
| 45. | ಧರೆಗವತರಿಸಿದೆ ಸ್ವರ್ಗದ ಸ್ಪರ್ಧಿಯು | 55 |
| 46. | ಬನ್ನಿ ಮೋಡಗಳೇ ಭರತ ಭುವಿಯ ಕಡೆಗೆ | 56 |
| 47. | ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ | 57 |
| 48 | ಬಿದಿರು ನಾನಾರಿಗಲ್ಲದವಳು | 58 |
| 49. | ಓ ದಾರಿಗನೇ | 59 |
| 50. | ಗಂಗೆ ತುಂಗೆ ಹರಿವ ನಾಡು | 60 |
| 51. | ಕಾವೇರಿ ತಾಯಿ | 60 |



## 96. ಋತುಮಾನ ಸಂಪುಟದಿ ಹೊಸಕಾವ್ಯ ಬರೆದವಳೆ

ಕೃಪೆ: ಯೂಟ್ಯೂಬ್

ಋತುಮಾನ ಸಂಪುಟದಿ ಹೊಸಕಾವ್ಯ ಬರೆದವಳೆ
ಮಾನವ ಕುಲವಾ ಕಾಯುವ ತಾಯೇ ॥ಪ॥

ಪಚ್ಚೆ ಕಾಡಿನ ನಡುವೆ ನಚ್ಚ ಪ್ರೀತಿಯ ಧಾರೆ
ಸಂಗೀತ ಹಾಡುತ ಬಂದ ಮೆರಗು ಜಾರು ಜಲಪಾತ
ವಿಧ ವಿಧ ಅವತಾರ ಹಸಿರು ಜೀವನ ತಾಯಿಗೆ ಚೆಂದ ಸೆರಗು॥1॥

ಮಣ್ಣು ಗಂಧವ ಹರಡಿ ಮೌನ ಹಂದರ ಹಾಸಿ
ಈ ಕಾಡು ತಾನಾಽಗಿ ತಂದ ನಿಧಿಯು
ಮಾತು ತಿಳಿದಾಟ ಮರಗಿಡಕೊಂದಾಗ
ಮನದಾ ಮೌನಕೆ ತಾಳ್ಮೆಯಲ್ಲಿಯವರೆಗೂ ॥2॥

## 97. ಬಾಳಿ ಬೆಳೆಯಲಿ ನಮ್ಮ ಭಾರತದೀ ಮಲೆನಾಡು

ಸಂಗ್ರಹ : ವಿದ್ಯಾ ಭಟ್ಟ್ ಕೆವಿ

ಬಾಳಿ ಬೆಳೆಯಲಿ ನಮ್ಮ ಭಾರತದೀ ಮಲೆನಾಡು
ಮೇಲಾದ ಸಿರಿ ಸಂಪದದಿ ನಲಿಯಲೀ ನಾಡು ॥ಪ॥

ವನ ಸೊಬಗಿನೊಳು ಮನವ ಸೂರೆಗೊಳುತಿಹ ನಾಡು
ಬನದಲಿ ಮೃಗ ಪಕ್ಷಿ ನಲಿಯುತಿಹ ನೆಲೆಬೀಡು ॥1॥

ಅಡಿಕೆ ಯಾಲಕ್ಕಿ ಮೆಣಸುಗಳಿದು ತಾಯ್ನಾಡು
ಅಡಕವಾಗಿಹುದಿಲ್ಲಿ ಬೆತ್ತ ಬಿದಿರಿನ ಕಾಡು ॥2॥

ಮೆತ್ತಗಾಗಿಹ ನೆಲವು ಭತ್ತ ಬೆಳೆಯುವ ಹೊಲವು
ಸುತ್ತಲೆಲ್ಲವೂ ಜಲವೂ ಮುತ್ತಿನಂತಿಹ ನಾಡು ॥3॥

## 95 ಪರಿಸರ ಪರಿವಾರ

**ಸಾಹಿತ್ಯ: ಎಚ್.ಎಸ್. ವೆಂಕಟೇಶಮೂರ್ತಿ**

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ ॥ಪ॥

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು ॥

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು ॥1॥

ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು ॥

ದಾರಿಯುದ್ದಕು ಪೈರು ನಗುವಂತೆ ನೀರುಣಿಸಿ
ಹಾಲು ತೆನೆಯಲಿ ಅಮೃತ ತುಂಬ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು ಕೃಪೆಯನಿಟ್ಟು ॥2॥




| ಅ.ನಂ | ಕವನದ ಹೆಸರು | ಪುಟ |
|---|---|---|
| 52 | ಪಡುವಣ ತೆಂಕಣ ಮೂಡಣದಂಚಿನ | 61 |
| 53. | ಬಾರೋ ಹಸಿರಿನ ಹರಿಕಾರ | 62 |
| 54. | ಧರೆಗೆ ಜ್ವರವು ಬಂದಿದೆ | 63 |
| 55. | ಧವಳ ಹಿಮದ ಗಿರಿಯ ಮೇಲೆ | 64 |
| 56. | ವಂದಿಪೆನು ಈ ಭೂಮಿಗೆ | 65 |
| 57. | ಹಸಿರಿನ ಓಕುಳಿ | 66 |
| 58 | ಹಸಿರು ಹಸಿರಿನ ಹೆಸರಿಲ್ಲದ ಮರ | 67 |
| 59. | ತಾಯೇ ನಿನ್ನ ಮಡಿಲಲಿ | 68 |
| 60. | ಪ್ರಕೃತಿಯೇ ಗುರು | 68 |
| 61. | ಚೆಟ್ಟಮ್ಮ ಚೆಟ್ಟಮ್ಮ ಪಚ್ಚಾನಿ ಚೆಟ್ಟಮ್ಮ (ತೆಲಗು) | 69 |
| 62. | ಕೋಗಿಲೆ ದನಿ | 70 |
| 63. | ಮಳೆಯಪ್ಪ ಮಳೆರಾಯ | 71 |
| 64. | ಪೇಡ ಲಗಾವೊ (ಹಿಂದಿ ಹಾಡು) | 72 |
| 65. | ನವಿಲು | 73 |
| 66. | ಸೂರ್ಯನ ಪ್ರೀತಿಸು | 74 |
| 67. | ಪರಿಸರ ಸಂರಕ್ಷಣೆ | 75 |
| 68. | ಗಿಣಿಯೇ ಗಿಣಿಯೇ | 76 |
| 69. | ಸಹ್ಯಾದ್ರಿಯ ಸಾಲಿನಲಿ | 77 |
| 70. | ಏನಿಹುದು ಏನಿಹುದು ನಿನ್ನ ತೀರ | 78 |
| 71. | ನಮ್ಮ ಪರಿಸರ ಸುಂದರ | 79 |
| 72 | ದಿನಕರನ ದಿನಚರಿ | 80 |
| 73 | ಹಸಿರಿನ ಉಸಿರಿದೆ | 81 |
| 74. | ನಿಸರ್ಗ ಗೀತೆಗಳು | 82 |
| 75. | ನಿಸರ್ಗದ ಸಂಗೀತ ಪಾಠ | 83 |
| 76. | ಬನ್ನಿ ಮಾನವರಾಗೋಣ | 84 |
| 77. | ಪುಷ್ಪರಹಿತ ಉದ್ಯಾನ | 85 |
| 78. | ಋತು ವೈಭವ | 86 |

| ಅ.ನಂ | ಕವನದ ಹೆಸರು | ಪುಟ |
|---|---|---|
| 79. | ವಸಂತ | 87 |
| 80 | ಹೋಗುವೆನು ನಾ | 88 |
| 81. | ಈ ಬಾನು ಈ ಚುಕ್ಕಿ | 89 |
| 82. | ಪರಾಗ | 90 |
| 83. | ಮಳೆ ಬಿಲ್ಲು | 91 |
| 84. | ಹಕ್ಕಿಗಳ ಸಂಗದಲಿ | 92 |
| 85. | ಜಡಿಮಳೆ | 93 |
| 86. | ನಮ್ಮೂರ ಕೆರೆ | 94 |
| 87. | ಹೊಸತಿನಾಸೆ | 95 |
| 88. | ಹಕ್ಕಿ ಹಾರುತಿದೆ ನೋಡಿದಿರಾ! | 96 |
| 89. | ಮಳೆ | 97 |
| 90. | ಪ್ರಾಣಿ ಜೀವನ | 98 |
| 91. | ಮಿಂಚುಳ್ಳಿ | 99 |
| 92. | ಸಹ್ಯಾದ್ರಿ ಶೃಂಗದಲಿ | 100 |
| 93. | ಸಿರಿಯ ಸೊಬಗು | 102 |
| 94. | ಪ್ರಕೃತಿ | 103 |
| 95. | ಪರಿಸರ ಪರಿವಾರ | 104 |
| 96. | ಋತುಮಾನ ಸಂಪುಟದಿ ಹೊಸಕಾವ್ಯ ಬರೆದವಳೆ | 105 |
| 97. | ಬಾಳಿ ಬೆಳೆಯಲಿ ನಮ್ಮ ಭಾರತದಿ ಮಲೆನಾಡು | 105 |
| 98. | ಬಾನಂಗಳದಲಿ ಕಂಕಣ ಕಟ್ಟಿದೆ | 106 |
| 99. | ಈ ನೆಲ ಈ ಜಲ ಈ ಕಾಡು | 107 |
| 100. | ಗೆಲುವಯ್ಯೆ ಗೆಲುವೋ ತಾನಿ ತಂದಾನ | 107 |
| 101. | ಪಶ್ಚಿಮಘಟ್ಟದ ಬೆಟ್ಟದ ಮರಗಳ ಉಳಿಸಲು ನಡೆನಡೆವಾ | 109 |
| 102. | ಎಲ್ಲಿ ಮಣ್ಣು ಎಲ್ಲಿ ನೀರು ಹುಡುಕುತಿಹುದು ತಾಯಿಬೇರು | 110 |
| 103. | ಹಸಿರು ವನದ ಸಂಪಿಗೆ ಸಹ್ಯಾದ್ರಿಯ ಸೊಂಪಿಗೆ | 111 |
| 104. | ಬನದಲಿ ದಿನ ಹೂಗಳು | 112 |




# 94 ಪ್ರಕೃತಿ

– ತೃಪ್ತಿ ಹೆಗಡೆ

ಮುಸುಕಿದ ಇಬ್ಬನಿಯ ಮಬ್ಬಿನಲಿ
ಹಕ್ಕಿಗಳ ಚಿಲಿಪಿಲಿ ಕಲರವ
ಮನಸ್ಸಿಗೆ ಆನಂದದ ಅನುಭವ..

ನನ್ನ ಕಲ್ಪನೆಯಲ್ಲಿ ನೀನೊಂದು ವಿಸ್ಮಯ
ಬಣ್ಣಿಸಿದಷ್ಟು ಸಾಲದು ನಿನ್ನಯ ರೂಪವ
ಹೇಗೆ ವರ್ಣಿಸಲಿ ನಾ ನಿನ್ನ....

ಚಿಟಪಿಟಿಯ ಮಳೆಯಲಿ
ಹಚ್ಚ ಹಸಿರಿನ ವನಸಿರಿಯಲಿ
ಸಿಡಿಲಿನ ಆರ್ಭಟ, ಮಿಂಚಿನ ಓಟ
ಮನಕೆ ಮುದ ನೀಡುವ ನಿನ್ನಯ ದೃಶ್ಯ
ಬೇಸರ ಕಳೆಯಿತು ನನ್ನ ಮನದ ದುಗುಡವನ್ನು..

ಹಲವು ಹೆಸರುಗಳ ಒಡತಿ ನೀನು
ನಿನ್ನ ಸೊಬಗಿಗೆ ಮೈ ಮರೆತೆ ನಾನು
ನಿನ್ನಯ ರೂಪ ರಾಶಿಯು ಮುಗಿಯದ
ಸರಪಟಗಳ ಮಾಲೆಯಂತೆ..

## 93 ಸಿರಿಯ ಸೊಬಗು

– ಗೀತಾ ಜೋಶಿ

ಸಿರಿಯ ಸೊಬಗಿನ
ಸಹಜ ಸುಂದರ
ಸಾಲು ಸಾಲಿನ ಶಿಖರಕೆ
ನಿತ್ಯ ಹಸುರಿನ ಬಣ್ಣದೋಕುಳಿ

ನೇಸರನ ಉದಯದ
ಶೃಂಗಾರದ ಆಗಮನಕೆ
ಪ್ರಕೃತಿಯ ಒಲವಿನ
ಬಿಂಕದ ವೈಯಾರ

ಸಂಪಿಗೆಯ ಕಂದಿನೊಳು
ಕೋಗಿಲೆಯ ಇಂಪಿನೊಳು
ವೃಕ್ಷಗಳ ತಂಪಿನೊಳು
ಮೈ ಚೆಲ್ಲಿ ಮಲಗಿವೆ ಪರ್ವತಗಳು

ದುಮ್ಮಿಕ್ಕಿ ಹರಿಯುವ ಜಲಪಾತ
ಪಶು ಪಕ್ಷಿಗಳ ನಿತ್ಯದ ಚೆಲ್ಲಾಟ
ಹಗಲಿನ ನೋಟದ ಭಾಗ್ಯ
ತನಗಿಲ್ಲೆಂದು ಕೊರಗುತಿಹ ಬಾನ ಚಂದಿರ

ಕಣ್ಣ ತೆರೆದು ನೋಡು ಮನುಜ
ಇಲ್ಲೇ ಇಹುದು ಸ್ವರ್ಗ ಸುಖ
ಪ್ರಕೃತಿಯನರಿತು ಬಾಳುವ ಈಗ
ಮಂದಿರವಾಗಲೆಮಗೆ ಈ ನಿಸರ್ಗ



## 1 ಈ ನೆಲ ಈ ಜಲ ಈ ಮಣ್ಣು ನಮ್ಮದು

ಈ ನೆಲ ಈ ಜಲ ಈ ಮಣ್ಣು ನಮ್ಮದು
ರಕ್ಷಿಸುವ ಹೊಣೆಗಾರಿಕೆ ನೀವೇ ಹೇಳಿ ಯಾರದು
ನೆಲವಿಲ್ಲದೆ ಜಲವಿಲ್ಲ, ಜಲವಿಲ್ಲದೆ ಜೀವವಿಲ್ಲ
ಸಕಲ ಜೀವರಾಶಿಗಳಿಗೂ ನೆಲ ಜಲ ಬೇಕಲ್ಲ ॥1॥

ನೀರು ಕಾದು ಆವಿಯಾಗಿ ಆವಿ ಆಕಾಶಕೋಗಿ
ಮೋಡವಾಗಿ ಮಳೆ ಸುರಿದು ಮನುಜ ಕುಲಕೆ ಬೆಳಕಾಗಿ ॥2॥

ಒಡಲಾಳದ ನೋವುಗಳ ಒಳಗೊಳಗೆ ಸಹಿಸಿಕೊಂಡು
ಅಳಲಾರದೇ ಭೂಮಿತಾಯಿ ನಮ್ಮ ಸಾಕಿ ಸಲಹಿದಳು ॥3॥

ಮರಗಿಡಗಳ ಬೆಳೆಸಲಿಲ್ಲ ಬೆಳೆದ ಮರವ ಉಳಿಸಲಿಲ್ಲ
ಹೆತ್ತೊಡಲಿಗೆ ಬೆಂಕಿ ಇಡುವ ಭ್ರಷ್ಟರು ನಾವಾದೆವಲ್ಲ ॥4॥

ಎಲ್ಲರೂ ಒಂದಾಗೋಣ ಮಾನವ ಕುಲ ಉಳಿಸೋಣ
ಪರಿಸರ ಸಂರಕ್ಷಣೆಗೆ ಎಲ್ಲರೂ ಮುಂದಾಗೋಣ ॥5॥

ಈ ನೆಲ ಈ ಜಲ ಈ ಮಣ್ಣು ನಮ್ಮದು
ರಕ್ಷಿಸುವ ಹೊಣೆಗಾರಿಕೆ ಎಂದೆಂದೂ ನಮ್ಮದು ॥6॥

## 2. ಪ್ರಕೃತಿ ಪೂಜೆಗೆ ಹೊರಟು ಬನ್ನಿರಿ

– ವನಸಿರಿ ಭಾಗ ಎ

(ಪಶ್ಚಿಮಘಟ್ಟ ಉಳಿಸಿ ಪಾದಾಯಾತ್ರೆಯ ಹಾಡು)

ಸಾಕು ಕೃತಕತೆ ಪ್ರಕೃತಿ ಪೂಜೆಗೆ ಹೊರಟು ಬನ್ನಿರಿ ಈಗಲೇ
ಹಲಸು ಬೀಗಿದೆ ಮಾವು ಮಾಗಿದೆ ಕೂಗಿ ಕರೆದಿದೆ ಕೋಗಿಲೆ॥

ದೂರದೂರಕೆ ದೂರದೂರಿಗೆ ಗಿರಿಯನೇರುತ ಹರಿದಿದೆ
ಕಾಡನಡುವಿನ ಕಾಲುದಾರಿಯು ಭೀಮತರುಗಳ ಮಧ್ಯದಿ
ಬೇರೆ ಬೇರೆಯ ಚಾರುತರದ ದೃಶ್ಯ ತೆರೆತೆರೆತೆರೆದಿದೆದೆ
ಪ್ರಕೃತಿಮಾತೆಯ ಮಮತೆ ಕುವರಿಯ ವನದ ವನಿತೆಯ ವಕ್ಷದಿ॥1॥

ಮರವು ಚಿಗುರಿದೆ ಚಿಗರೆ ನೆಗೆದಿದೆ ನವಿಲುಗರಿಯನು ಕೆದರಿದೆ
ಮೊಗ್ಗು ಹಿಗ್ಗಿದೆ ಹುಲ್ಲು ಹರಡಿದೆ ಜೇನು ಹನಿಹನಿ ಜಿನುಗಿದೆ
ಬೆಟ್ಟ ಬೆಟ್ಟವ ಅಟ್ಟುತ ತಟ್ಟುತ ತಟ್ಟಿ ಮುತ್ತನಿಟ್ಟಿದೆ
ಕಣಿವೆ ತೊಟ್ಟಿಲ ತೂಗು ಮುಗಿಲಿಗೆ ತೊರೆಯು ಜೋಗುಳ
ಹಾಡಿದೆ ॥2॥

ಹುಲ್ಲುಗಾವಲಿನಲ್ಲಿ ಹೊಂಗೆಯ ಹೂವು ಚೆಲ್ಲಿರುವೆಡೆಯಲಿ
ಅಲ್ಲದೋ ಆನಂದ ಗಂಧವು ಹೊಮ್ಮಿ ಗಮ್ಮನೆ ಹರಡಿದೆ
ಹೊಂಗೆಯೊಡಲನು ತಬ್ಬಿ ಹಬ್ಬಿದ ಬಳ್ಳಿಯೊಂದರ ಮಾಲೆಯು
ಗೋವ ಕಾಯುವ ಸಣ್ಣ ಚಿಣ್ಣರ ತೂಗು ಉಯ್ಯಾಲೆಯಾಗಿದೆ ॥3॥



ಇರುಳು ಹಗಲುಗಳು ದಿನವು ಬಂದಿಲ್ಲಿ ಚುಂಬಿನೊಲಿವವು ರಹಸ್ಯದಲಿ
ಬೆಳಗು ಬೈಗುಗಳು ಪೂರ್ವಪಶ್ಚಿಮದಿ ನಿಣಿಕಿ ನೋಡುವವು ಹಾಸ್ಯದಲ್ಲಿ!
ಇಲ್ಲಿ ಕಬ್ಬಿಗನು ತೇಲುಕೈ ತಂದು ಹಾಡಿ ಕನ್ನಡದ ಕಬ್ಬವನು
ನಚ್ಚಿನಿನಿಯಳಹ ಕವಿತೆಯೊಡಗೂಡಿ ಬಾಳಿಗೀಯುವನು ಗಬ್ಬವನು

ಎತ್ತ ನೋಡಿದರು ಸುತ್ತ ಹಸುರು ಕಡಲೊ ಮುತ್ತಿಡುತಲಿಹುದಿಲ್ಲಿ
ಇಲ್ಲಿ ಶೃಂಗಾರವಿಲ್ಲಿ ಸೌಂದರ್ಯ ವಿಲ್ಲಿ ರಸಯೋಗ ಸುಖವಿಲ್ಲಿ!
ಹಸುರು ಹುಲ್ಲಿನಲ್ಲಿ ಮೊಲಗಳೈತಂದು ಚನ್ನೆಯಾಡುವವು ಚಂದದಲಿ;
ಅಲೆವ ದೆವ್ವಗಳು ಕೂಡ ಬಂದಿಲ್ಲಿ ಚೀರಿ ಕುಣಿವುವಾನಂದದಲಿ!

ನಿದ್ದೆ ಮಾಳ್ಪ ಪೇರಾನೆಗಳ ತೆರದಿ ಕರಿಯ ಬಂಡೆಗಳು ಬಿಹವು
ಗಿರಿಯ ಕಾಯುತಿಹ ಹಸುರು ಕೋಟೆಯೊಲು ಸುತ್ತ ಹೆಮ್ಮರಗಳೆದ್ದಿಹವು!
ಶಾಂತಿ ವಿಶ್ರಾಂತಿ ನಿರತೆಯಾನಂದ ಮೌನ ಮುಕ್ತಿಗಳಿಗಿದು ಬೀಡು;
ಗಿರಿಯಗೆಲ್ಲಬಂದಿಂದ ರಂಜಿಪುದು ನನ್ನ ನೆಚ್ಚಿನ ಮಲೆಯ ನಾಡು!

ಮಲಗಿಹ ಗಿರಿಗಳನೆಚ್ಚರಗೊಳಿಸುವೆ;
ಮೌನವನಿನ್ನೂ ಹೆಚ್ಚಿಸುವೆ!
ಯಾರಾನಂದಕ ಹಾಡುವ ನೀನು?

## 92 ಸಹ್ಯಾದ್ರಿ ಶೃಂಗದಲಿ

– ಕುವೆಂಪು (ನವಿಲು ಕವನ ಸಂಕಲನದಿಂದ)

ಮೇರೆಯರಿಯದಿಹ ನೀಲಿಯಾಗಸವ ಮುಡಿದಿಹ ಪರ್ವತ ಶೃಂಗವಿದು
ಮಳೆಯ ಮೋಡಗಳು ಹಾರಿಬಂದಿಲ್ಲಿ ತಾಂಡವವಾಡುವ ರಂಗವಿದು,
ಗುಡುಗು ಮಿಂಚುಗಳು ಸರಸವಾಡುತ್ತ ಸಿಡಿಲನು ಹಡೆಯುವ ತಾಣವಿದು
ನೇಸರಿಂದುಗಳು ನಿಚ್ಚ ಪಯಣದಲು ವಿಶ್ರಮಿಸುವ ನಿಲ್ದಾಣವಿದು

ಇಲ್ಲಿ ರಾತ್ರಿಯಲ್ಲಿ ಹೊಳೆವ ಚುಕ್ಕಿಗಳು ಮಿಣು ಮಿಣುಗುವ ಕಣ್ಬೇಟದಲಿ
ಬಹವು ತಣ್ಣದಿರನೆಡಬಲಂಗಳಲಿ ತಣಿಯೆ ಬೆಳ್ದಿಂಗಳೂಟದಲಿ

ಚೈತ್ರ ಮಾಸದಲಿ ತರುಲತಾಳಿಗಳ ತಳಿರು ಹೂವುಗಳ ಸಿರಿ ಮೆರೆಯೆ
ಶುಕ ಪಿಕಂಗಳಿನಿದನಿಯ ಬೀರುತ್ತ ಭಾವುಕರ ಮೋಹಿಸುತ ಕರೆಯೆ
ಯಕ್ಷಕಿನ್ನರರು ರಮಣ ರಮಣಿಯರು, ಬಹರು ಗಾನದಲಿ ಮೈಮರೆಯೆ;
ಪ್ರಣಯ ಕೂಟಗಳ ಸರಸದಾಟಗಳ ಸೊಗದ ಕಂಬನಿಯ ಸರಿ ಸುರಿಯೆ!

ಇಲ್ಲಿ ಮಾಗಿಯಲಿ ಬಿಳಿಯ ಮಂಜುಗಳು ಬಂದು ಕಿಕ್ಕಿರಿದು ಕವಿಯುವವು;
ಇಲ್ಲಿ ಹದ್ದುಗಳು ಚೀರುತಾಗಸದಿ ವನದ ಮೌನವನು ತಿವಿಯುವವು
ಇಲ್ಲಿ ಮರುದನಿಗಳುದಿಸಿಯೊಮ್ಮೊಮ್ಮೆ ಬದುಕಿ ಬಂಡೆಗಳು ಕೂಗುವವು
ಇಲ್ಲಿ ಜೀವನವೆ ಸಾವನೊಲಿದೊಮ್ಮೆ ಜೀವ ಸಾವುಗಳು ತಾಗುವವು,



## 3. ದೇಶ ದೇಶ ದೇಶ ದೇಶ ನನ್ನದು

– ಗೀತ ಭಾರತಿ

ದೇಶ ದೇಶ ದೇಶ ದೇಶ ನನ್ನದು
ಸಿಂಧು ಕಣಿವೆ ಕೈಲಾಸಗಿರಿಯು ನನ್ನದು ॥ಪ॥

ಹರಿಹರಿಯುವ ನೀರಕಣ ಮೇಲ್ನಗುವ ಬಾನಂಗಣ
ಹಸಿರಾಗಿಹ ಮಣ್ಣಕಣ ಹಾರಾಡುವ ಹಕ್ಕಿಗಣ
ಹೊಳೆಹೊಳೆಯುವ ಚುಕ್ಕಿಗಣ ಎಲ್ಲ ನನ್ನದು
ಎಲ್ಲ ನನ್ನದು ಎಲ್ಲ ನನ್ನದು ॥1॥

ನಗೆ ಚೆಲ್ಲುವ ಮಲ್ಲಿಗೆಯ ಹೂದಳವು ನನ್ನದು
ಬಗೆ ಬಗೆಯ ತೆಂಗುಬಾಳೆ ಕಡಲಾಗಿಹ ಕಾಡಹೊಳೆ
ಬೆಳೆದು ನಿಂತ ವನಸಿರಿಯು, ಕಂಗೊಳಿಪ ಬೃಂದಾವನ
ಎಲ್ಲ ನನ್ನದು ಎಲ್ಲ ನನ್ನದು ॥2॥

# 4 ಭೋರೆಂದು ಸುರಿದು, ಸುಧೆಯಾಗಿ ಹರಿದು

– ಜಲಭಾರತಿ ಕರ್ನಾಟಕ

ಭೋರೆಂದು ಸುರಿದು, ಸುಧೆಯಾಗಿ ಹರಿದು
ಭುವಿಗಾಯ್ತು ಜೀವದುಸಿರು
ಭುವಿಯೊಡಲಿಗಿಳಿದು, ಹೊನ್ನಾಗಿ ಮೆರೆದು
ಜಲವಾಯ್ತು ಜಗದ ಉಸಿರು॥

ನದಿಯಾಗಿ ಹರಿದು ತೊರೆಯಾಗಿ ಕುಣಿದು
ನೆರವಾಯ್ತು ಜೀವಕುಲಕೆ
ತಾನುಂಡ ನೆಲಕೆ ಕೇಡನ್ನೆ ಬಗೆವ
ದುರ್ನಡತೆ ಮನುಜಗೇಕೆ ॥

ಹೊಲಸಾಯ್ತು ನದಿಯು ಬರಿದಾಯ್ತು ಕೆರೆಯು
ಜಲನಿಧಿಯ ಶೋಧವಾಯ್ತು
ತಾಯ್ನೆಲವ ಕೊರೆದು ಹೊಸಕೊಳವೆಯಿರಿದು
ಭುವಿರಕ್ತ ಮೊಗೆಯಲಾಯ್ತು ॥

ಹಸಿರೆಲ್ಲ ತರಿದು, ಹೊಸ ಮಹಲು ಬೆಳೆದು
ನೆಲವೆಲ್ಲ ಹೊಸತು ಹೊಸತು
ಮಳೆನೆಲವ ತಬ್ಬಿ ನೀರಿಂಗಲೆಂತು
ಭುವಿ ದಾಹ ತಣಿವುದೆಂತು॥

ಜಲವೆಮ್ಮ ನಿಧಿಯು ಜೀವಕ್ಕೆ ಸುಧೆಯು
ಅಮರತ್ವವಿರಲಿ ಜಲಕೆ
ವನಸಿರಿಯ ಬೆಳೆಸಿ ಭುವಿದಾಹವಳಿಸಿ
ಭವಿತವ್ಯವಿರಲಿ ಜಗಕೆ ॥



# 91 ಮಿಂಚುಳ್ಳಿ

– ಕುವೆಂಪು (ನವಿಲು ಕವನ ಸಂಕಲನ)

ಬಣ್ಣದ ರೆಕ್ಕೆಯ ಬಣ್ಣದ ಕೊಕ್ಕಿನ
ಬಣ್ಣದ ಗಾನದ ಬನಗಳ ಬೆಸ್ತನೆ,
ಬಣ್ಣದ ಜೀವದ ಮಾಂಗುಲಿಯೆ
ಮಾನವರರಿಯದ ಗಾನ ತರಂಗದೊಳೇನನು ಸಾರುವೆ
ವಿಪಿನ ಪ್ರವಾದಿಯೆ
ಹಳ್ಳಿಯ ಜೋಯಿಸ ಮಿಂಚುಳ್ಳಿ?
ನಿನ್ನುಲಿಯನು ಕೇಳಿದ ಹಳ್ಳಿಗರು ನೆಂಟರ ಸಾವನು ಸಾರುವುದೆಂದು
ಮನದಲಿ ತಲ್ಲಣಗೊಳ್ಳುವರು!
ತರಳೆಯರಾದರೆ ಬಿಸುಸುಯ್ಯುತ್ತ ತಿರುಗಲು ಹೋಗಿಹ ಗಂಡರ ನೆನೆದು
ಸುಮ್ಮನೆ ನಿನ್ನನು ಶಪಿಸುವರು!
ಕಬ್ಬಿಗನಾದರೂ ಸಂತಸದಿಂದ ಬನದಿಂದೈತಹ ದನಿಯನು ಕೇಳಿ
ನಿನ್ನನ್ನು ಕೀರ್ತಿಸಿ ವಂದಿಪನು।
ಹೆದರುವುದೇತಕೆ ಹಾಡೆಲೆ
ಹಕ್ಕಿ, ಹಾಡುವ, ಹಾರುವ ಬಣ್ಣದ ಚುಕ್ಕಿ!
ಮೂರ್ಖರ ಮಾತಿಗೆ ಮರುಗುವರೇ?
ಮಿಂಚಿನ ಬಳ್ಳಿಗೆ ಕಾಮನ ಬಿಲ್ಲಿಗೆ ಜನಿಸಿದ ಹೂವೋ
ಹಕ್ಕಿಯೊ ನೀನು?
ಕಿಟ್ಟನ ಕೊಳಲಿನ ಕಣ್ಣೇನು?
ವೇಗವ ನೋಡಲು ಮಿಂಚಿನ ಮರಿಯು!
ಬಣ್ಣವು ಕಾಮನಬಿಲ್ಲಿಗೆ ದೊರೆಯು!
ಕೊಳಲಿನ ದನಿಗೆಣೆಯಿಂಚರವು!
ಮೋನದ ಬನಗಳ ಗಾನದಿ ತುಂಬುವೆ;

ಮರಿಗುಡುಗು ಕೆಲೆವಾಗ
ಮಳೆಗಾಳಿ ಸೆಳೆವಾಗ
ಮರಗಿಡಗಳನ್ನು ಎಳೆದಾಗ
ನಾವ್ಯಾಕ, ಮನೆಯಲ್ಲಿ ಅವಿತು ಕೂತೇವೊ
ಕೋಡ್ಮಿಂಚು ಇಣಿಕಿಣಿಕಿ
ಕಣ್ಮಣಿಸಿ ಕೆಣಕೆಣಕಿ
ಬಾ ಗೆಣೆಯ ಹೊರಗೆ ಎನುವಾಗ
ಒಳಸೇರಿ ಹರೆ ಮೀರಿದ್ದಾಂಗ ಕುಳಿತೇವೊ

## 90 ಪ್ರಾಣಿ ಜೀವನ

**–ದ.ರಾ. ಬೇಂದ್ರೆ** (ಉಯ್ಯಾಲೆ ಕವನ ಸಂಕಲನದಿಂದ)

ಹರಿಗಡೆದ ಕೆರೆಯ ಕೊಳೆಗೊಂಡು ನಾರುವ ನೀರು
ರಸವ ಹೀರುವ ಕಸದ ತವರು ಮನೆಯು ಸಾವ–ಕುದುರೆಯ
ದಂಡಿನೊಲು ಬರುವ ಸೊಳ್ಳೆಗಳ
ಮೇವು–ಮೀಸಲಕಾಗಿ ಕಾದ ಬನವು

ಮೀಂಬುಲಿಗೆ ಬೆಳ್ಳಕ್ಕಿ ಬೇಟೆಯಾಡಲು ಅಡವಿ; ಮೀನಗಳ ಹುಟ್ಟು
ಮನೆ; ಸುಡುವ ಕಡೆಯು;
ಮೀನ ಬಲೆಗಾರರಾಡುಂಬೋಲವು; ಹಕ್ಕಿಗಳ
ಜೀವಕ್ಕೆ ಗುರಿಯಿಡುವರಾಟದೆಡೆಯ

ಜೀವನವು ವಿಷವಾದ ವಿಷಮ ಲೀಲೆ
ಜೀವಕಲಹದ ಪ್ರಥಮ ಪಾಠಶಾಲೆ; ಪ್ರಾಣಿಜೀವನವೊಂದು
ಪ್ರಾಣಹರಣ; ಜೀವಜೀವಕೆ ಹರಣ; ಜೀವನ ರಣ.



## 5 ಹನಿ ಹನಿ ನೀರು ತಾನು ಅಮೂಲ್ಯ

**– ಜಲಭಾರತಿ ಕರ್ನಾಟಕ**

ಹನಿ ಹನಿ ನೀರು ತಾನು ಅಮೂಲ್ಯ
ಅದರೊಳು ಅಡಗಿದೆ ಜಗದ ಜೀವನ ಭವಿಷ್ಯ
ಜಲವಿದು ಸುರಗಂಗೆಯ ಅವತಾರ
ಜೀವ ಸಂಕುಲದ ಮೂಲಧಾರ
ಬಿಂದು ಬಿಂದುಗಳು ತೀರ್ಥ ಸಮಾನ
ಖಗ ಮೃಗ ನರರಿಗೆ ಅಮೃತಪಾನ॥

ಪ್ರಕೃತಿಯೂ ನೀಡಿದೆ ಜಲ ಸಂವೃದ್ಧಿ
ಇನ್ನೇತಕೆ ವಿಕೃತಿಯ ದುರ್ಬುದ್ಧಿ
ಹದಗೆಡಿಸಿದೆ ಸೃಷ್ಟಿಯ ಸಂತುಲನ
ಸಾಗಲಿ ಸಮರಸತೆಯ ಸಂಚಲನ॥

ಬರಿದಾಗುತಿದೆ ಭೂಮಿಯ ಒಡಲು
ಕರಗುತಲಿದೆ ಜಲಧಾರೆಯ ಮಡಿಲು
ಮನುಜನಿಗೇಕೆ ಈ ಪರಿ ದಾಹ
ಭೋಗ ಜೀವನದ ಅತಿ ವ್ಯಾಮೋಹ॥

ಮನೆ–ಮನೆಯಲಿ ಮನ–ಮನದಲಿ
ಗ್ರಾಮ ನಗರ ಗಿರಿಕಾನನದಲ್ಲಿ
ಪಸರಿಸಲಿ ಜಲಜಾಗೃತಿ ಅಲೆಯು
ಉಕ್ಕಲಿ ಚಿರ ಸಂತೃಪ್ತಿಯ ಸೆಲೆಯು ॥

## 6 ಜೇನು ನಮ್ಮ ಒಡನಾಡಿ

– ಶೈಲಜಾ ಹೆಗಡೆ ಗೋರ್ನಮನೆ

ಜೇನು ನಮ್ಮ ಒಡನಾಡಿ
ಜೀವ ಜಗದ ಜೀವ ನಾಡಿ
ಜೇನು ಉಳಿವು ಜಗದ ಉಳಿವು
ಜೇನು ಉಳಿಸಿ ನೆಲವ ಉಳಿಸಿ
ಜೇನು ಕುಲಕೆ ನಮ್ಮ ನಮನ ॥ಪ॥

ಹೂವು ಹೂವು ಅರಳಿ ನಗಲು
ಪರಾಗ ಹರಡಿ ಫಲವು ಬಿಡಲು
ಜೇನು ತಾನು ಅಲೆವುದು
ನಮ್ಮನ್ನೆಲ್ಲಾ ಪೊರೆವುದು
ಜೇನ ಉಳಿಸಿ ॥1॥

ಮರದ ಮರೆಗು ಮನೆಯ ಬದಿಗು
ಗೂಡುಕಟ್ಟಿ ನಿಧಿಯನಿಟ್ಟು ನಮಗೆ
ಧಾರೆ ಎರೆವುದು, ಕರ್ಮಯೋಗಿಯಾಗಿ
ತಾನು ಮತ್ತೆ ದುಡಿವುದು
ಜೇನು ಕುಲಕೆ ನಮ್ಮ ನಮನ ॥2॥

ಜೇನುಕುಲದ ಶ್ರಮವ ನೋಡು
ದುಡಿಮೆಯೊಂದೇ ಅದರ ಹಾಡು
ಹೂವ ಹೀರಿ ಹನಿಯ ಹಿರಿದು
ಮಧುರ ಮಧುವ ಕೊಡುವದು
ನಮ್ಮ ಬದುಕ ಪೊರೆವುದು
ಜೇನು ಕುಲಕೆ ನಮ್ಮ ನಮನ ॥3॥



ಯುಗಯುಗಗಳ ಹಣೆ ಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸ ಗಾಲದ ಹಸು ಮಕ್ಕಳ ಹರಸಿ
ಹಕ್ಕಿ ಹಾರುತಿದೆ! ನೋಡಿದಿರಾ?

ಬೆಳ್ಳಿಯ ಹಳ್ಳಿಯ ನರಿಯ ಮಾರಿ
ತಿಂಗಳನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ,
ಹಕ್ಕಿ ಹಾರುತಿದೆ! ನೋಡಿದಿರಾ?

ಮುಟ್ಟಿದೆ ದಿಙ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದೊ?
ಬಲ್ಲರು ಯಾರಾ ಹಾಕಿದ ಹೊಂಚ!
ಹಕ್ಕಿ ಹಾರುತಿದೆ! ನೋಡಿದಿರಾ?

## 89 ಮಳೆ

– ದ.ರಾ. ಬೇಂದ್ರೆ
(ಉಯ್ಯಾಲೆ ಕವನ ಸಂಕಲನದಿಂದ)

ಮಳೆ ಬರುವ ಕಾಲಕ್ಕೆ
ಒಳಗ್ಯಾಕ ಕೂತೇವೊ ಇಳೆಯೊಡನೆ
ಜಳಕ ಮಾಡೋಣ ನಾವೂನು,
ಮೋಡಗಳ ಆಟ ನೋಡೋಣ

# 88 ಹಕ್ಕಿ ಹಾರುತಿದೆ ನೋಡಿದಿರಾ!

–ದ.ರಾ. ಬೇಂದ್ರೆ

(ಉಯ್ಯಾಲೆ ಕವನ ಸಂಕಲನದಿಂದ)

ಇರುಳುರುಳಳಿದು ದಿನದಿನ ಬೆಳಗೆ
ಸುತ್ತು ಮುತ್ತಲ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ! ನೋಡಿದಿರಾ?

ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿಹೊಳೆ ಬಣ್ಣದ ಗರಿಗರಿಯುಂಟು
ಕನ್ನನ ಹೊನ್ನನ ಬಣ್ಣ ಹಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು;
ಹಕ್ಕಿ ಹಾರುತಿದೆ! ನೋಡಿದಿರಾ?

ನೀಲಮೇಘಮಂಡಲಸಮ ಬಣ್ಣ
ಮುಗಿಲಲಿಗೆ ರೆಕ್ಕೆಗಳೊಡೆದವೋ ಅಣ್ಣ!!
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣು
ಹಕ್ಕಿ ಹಾರುತಿದೆ! ನೋಡಿದಿರಾ?

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡಖಂಡಗಳ
ಸಾರ್ವಭೌರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ! ನೋಡಿದಿರಾ?



ಹಸಿರ ಉಸಿರಿಗೊಂದೆ ಮಂತ್ರ
ಜೇನು ರಕ್ಷೆಯೊಂದೆ ಸೂತ್ರ
ಜೇನ ಬಲವು ನಮ್ಮ ಒಲವು
ಅರಿವ ಹರವ ಹರಡುವಾ
ನಾವು ಕೃಷಿಕರಾಗುವಾ
ಜೇನ ತೃಷೆಯ ನೀಗುವಾ
ಜೇನು ಉಳಿಸಿ ನೆಲವ ಉಳಿಸಿ ॥4॥

# 7. ಹಾಡ ಕಟ್ಟಿ ನವನಾಡ ಕಟ್ಟಿ

ಹಾಡ ಕಟ್ಟಿ ನವ ನಾಡ ಕಟ್ಟಿ
ಈ ನೆಲಕೆ ನಮಿಸ ಬನ್ನಿ
ಕಾಡ ಉಳಿಸ ಬನ್ನಿ
ನಮ್ಮ ನಾಡ ಉಳಿಸಿ ಬನ್ನಿ ॥ಪ॥

ಜೀವ ಜಾಲದ ಉಸಿರ ಹಸಿರದು
ಎಲೆಯು ತಂಪು ನೋಡ
ಈ ಮರವ ಕಡಿಯ ಬೇಡ
ಇನ್ನೂ ಸಸಿಯ ಬೆಳೆಸು ಕೂಡಾ ॥1॥

ಮರದ ಬೇರಿಗೆ ಮಣ್ಣ ಉಳಿಸುವ
ಶಕ್ತಿಯಿರುವದಣ್ಣ
ಬೆಳೆಗೆ ಸಾರ ಸೇರಿಸಣ್ಣ
ಮಳೆಗೆ ಜೀವ ಕೊಡುವದಣ್ಣ ॥2॥

ಬೆಟ್ಟ ಗುಡ್ಡ ಅದು ಬೆಳ್ಳಿ ಗಟ್ಟಿ ನೋಡು
ತರುವದಣ್ಣ ಮಳೆಯ
ಬಂಡೆ ಜಲದ ಸೆಲೆಯ ಒಡೆಯ
ನೀರು ಸಸಿಗೆ ಜೀವದೊಡೆಯ ॥3॥

ಕೆರೆ ಕುಂಟೆ ಕಟ್ಟಿ ಬಾವಿ ಬಂಕ ತೋಡಿ
ನೀರು ನೆಲಕೆ ಇಳಿಸಬೇಕು
ಮಣ್ಣಲ್ಲಿಂಗಿಸಬೇಕು
ಬರಕೆ ತಡೆಯನೊಡ್ಡಬೇಕು ॥4॥

## 8. ಸ್ವರ ವನ

**– ದಿವಾಕರ ಹೆಗಡೆ, ಧಾರವಾಡ**

ಕಾನನ ಕಾನನ ಗಿರಿವನದಾನನ
ಜೇನಿನ ದನಿ ಹಕ್ಕಿಯ ಗಾನ ।
ಮಾನವ ಗಾನದ ತಾನ ವಿತಾನಕೆ
ಆನುವ ಸ್ವರವನ ಸಂತಾನ॥

ಕೋಗಿಲೆ ಕೂಗಿಗೆ ಆನೆಗೆ ಆಡಿಗೆ
ಮಾಗಿದ ಸ್ವರ ಸಂಧಾನವಿದೆ।
ತೇಗದ ತರು ತಾನಾಗಿಯೆ ಒದಗಿದೆ
ಬಾಗಿದಲ್ಲಿ ವರ ವೀಣೆಯಿದೆ॥1॥

ಗೀತದ ಘಾತದ ವನ ಸಂವೇದನೆ
ಯಾತರದೀ ಶಿವ ಡಮರುಗವು।
ನೂತನ ತಂಬೂರದ ಸ್ವರ ಮೋದಕೆ
ಊತ ಸೋರೆ ಸಂಗಾತವದು॥



## 87 ಹೊಸತಿನಾಸೆ

**– ಬೆಲ್ಲಕೊಂಡ ಹ. ಲಕ್ಷ್ಮಣರೆಡ್ಡಿ**
(ಅರಳು ಮಲ್ಲಿಗೆ ಕವನ ಸಂಕಲನದಿಂದ)

ಬಿದ್ದಿತ್ತು ರಾತ್ರಿ ಮಳೆಯ ಹನಿ
ತುಂಬಿತ್ತು ಮುಂಜಾನೆ ತುಂತುರನಿ
ಭೂದೇವಿ ಹರಿಸಿದಳಾ ಕಂಬನಿ
ಬಾನೆಲ್ಲ ತುಂಬಿತ್ತು ಮಂಜಿನಾ ಹನಿ

ಎಲ್ಲೆಲ್ಲ ಜಲರಾಶಿಗಳ ನಿನಾದ
ನಡೆದಿತ್ತು ಸಂಭ್ರಮದ ಸಂವಾದ
ನವಜಗತ್ತಿನ ಕ್ಷಣಿಕ ಸಂಬಂಧ
ಅವುಗಳಿಗೂ ಬಿಡದಾ ಈ ಜೀವನಬಂಧ

ಮೂರು ಕಾಲಿನ ಕೂರಿಗೆಯ
ಬಿತ್ತುವ ಸಡಗರದ ಸಮಯ
ನಾ ಮುಂದ ನೀ ಮುಂದು ಎಂದು ಸದಾ
ತುಂಬಿತ್ತು ಹೊಸತಿನಾಬಿಂದು

ಎಲ್ಲೆಲ್ಲ ಕೆರೆ ಕಟ್ಟೆಗಳು ತುಂಬಿ
ಎಲ್ಲಡೆಯೂ ತನುಮನ ತುಂಬಿ
ಮಣ್ಣಿನ ವಾಸನೆ ತುಂಬಿತ್ತಾ ಜೀವರಾಶಿಯೊಳಗೆ
ಜನರೆಲ್ಲ ಕಾತರಿಸಿದ್ದರಾ ಆಗಮದ ಹೊಸತಿನಾಸೆಗೆ

## 86 ನಮ್ಮೂರ ಕೆರೆ

**– ಬೆಲ್ಲಕೊಂಡ ಹ. ಲಕ್ಷ್ಮಣರೆಡ್ಡಿ**

(ಅರಳು ಮಲ್ಲಿಗೆ ಕವನ ಸಂಕಲನದಿಂದ)

ನಮ್ಮೂರ ಕೆರೆ ನೋಡ ಜಾಣ
ಸುಂದರ ಶಾಂತಿಯ ಸಮರಸ ತಾಣ
ಎಲ್ಲೆಲ್ಲೂ ನೀರಿನ ನಿನಾದದ ತಾಣ
ಎಲ್ಲೆಲ್ಲ ನೋವು ನಲುವಿನ ಪರಂಧಾಮ ।

ಹಾವಿನಂತಹ ಅಂಕು ಡೊಂಕಾದ ಏರಿ
ಆಸು ಪಾಸಿನಲಿ ಪಸರು ಪೈರುಗಳ ಸಿ
ತುಂಬಿ ಹರಿದಿತ್ತು ಕರೆಯ ಕೋಡಿ
ದೂರದಲಿ ಪ್ರಕಾಶಿಸಿತ್ತು ಹನುಮನ ಗುಡಿ

ಸಮೃದ್ಧಿ ಜೀವನ ಆ ಕೆರೆಯಿದು
ಜಲರಾಶಿಗಳ ಒಡನಾಟಗಳಿಂದ
ನಾನು ಎಂಬ ಅಹಂ ಇಲ್ಲದೆ ಬದುಕಿತ್ತು
ಬಾಳಿತ್ತು ಬದುಕಿತ್ತು ನಿಸ್ವಾರ್ಥಿಯಾಗಿ।
ಹೇ ಮನುಜ ನಿನಗೆಲ್ಲಿಯದು
ಆ ಕೆರೆಯ ಸ್ನೇಹ ಔದಾರ್ಯ
ನೀ ಬೆಳೆಯುವೆ ಕ್ರೋಧವನು ಎಲ್ಲೆಲ್ಲೂ
ಸದಾ ಬದುಕುವೆ ನಿನ್ನದೇ ನಿನಗಾಗಿ



ಕಂಠದ ಕಸರಿನ ಅಂಟ ಬಿಡಿಸೆ ಒಣ
ಶುಂಠಿ ಮೆಣಸು ಮೈ ನಂಟಿಗಿದೆ।
ಗಂಟಲ ಗಾನದ ಸ್ವರ ಸಮ್ಮೇಲನ
ಈಂಟುವ ಕಿವಿಗೌಷಧವಾದೆ॥

ತಾರ ಮಂದ್ರ ಮಧ್ಯಮದಲಿ ಸಪ್ತಕ
ಸಾರ ಸರ್ವ ಮರ ವಾದ್ಯದಲಿ।
ತಾರ ಬಿಗಿದು ತರಂಗವ ಹೊಮ್ಮಿಸೆ
ಸೂರಿನ ಮರ್ಮರ ಸರಿಗಮದಿ॥

## 9. ನದಿ

**– ನಾಗೇಂದ್ರ ನಾಯಕ ತೊರ್ಕೆ**

(ಗುಬ್ಬಿಗೂಡು ಕವನ ಸಂಕಲನದಿಂದ)

ಜನಿಸುತ ಗಿರಿಯಲಿ ಹರಿಯುತ ಮುದದಲಿ
ಹಸಿರನು ತುಂಬುವೆ ನಾಡಿನಲಿ ॥
ಹಾರುತ ಇಳಿಯುತ ಗಿರಿಗಳ ದಾಟುತ
ಬರುತಿಹೆ ಸಾಹಸ ತೋರುತಲಿ ॥
ಭುವಿಯನು ತಣಿಸುತ ಬೆಳೆಯನು ಬೆಳೆಸುತ
ಹರಿಯುವೆ ಜನಮನ ತಣಿಸುತಲಿ ॥
ಹೊಸಹೊಸ ಮಣ್ಣನು ತರುತಲಿ ಹೊನ್ನನು
ಭೂಮಿಗೆ ಸತ್ವವ ತುಂಬುತಲಿ ॥
ಒಲಿದರೆಯ ಸೇವೆಯ ಮುನಿದರೆ ನಾಶವ
ಮಾಡುತ ಸೇರುವೆ ಜಲಧಿಯಲಿ ॥

# 10. ಈ ಮಣ್ಣು ನಮ್ಮದು

ಈ ಮಣ್ಣು ನಮ್ಮದು
ಈ ಗಾಳಿ ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಣಕಣದಲೂ ಭಾರತೀಯ ರಕ್ತ ನಮ್ಮದು ॥ಪ॥

ನಮ್ಮ ಕಾಯ್ವ ಹಿಮಾಲಯವೇ ತಂದೆ ಸಮಾನ
ನಮ್ಮ ಕಾಯ್ವ ಹಿಮಾಲಯವೇ ತಂದೆ ಸಮಾನ
ಗಂಗೆ ತುಂಗೆ ಕಾವೇರಿಯು ತಾಯಿ ಸಮಾನ
ಈ ದೇಶದ ಜನರೆಲ್ಲರೂ ಸೋದರ ಸಮಾನ
ಈ ನಾಡಿನ ಹೃದಯವದು ದೈವಸನ್ನಿಧಾನ ದೈವಸನ್ನಿಧಾನ ॥1॥

ತಂಗಾಳಿಗೆ ತಲೆಯ ತೂಗೋ
ಪೈರಿನ ಹಾಡು ಪೈರಿನ ಹಾಡು
ಹಾ ಹಾಡಿಗೆ ತಾಳ ಕೊಡುವ
ಯಂತ್ರದ ಜಾಡು ಯಂತ್ರದ ಜಾಡು
ವಿಜ್ಞಾನವು ಅಜ್ಞಾನವ ಗೆಲ್ಲುವ ಪಾಡು
ಹೊಸ ಭಾರತ ನಿರ್ಮಾಣವು
ಸಾಗಿದೆ ನೋಡು ಸಾಗಿದೆ ನೋಡು॥2॥



# 85 ಜಡಿಮಳೆ

**–ಕುವೆಂಪು** (ಪಕ್ಷಿಕಾಶಿ ಕವನ ಸಂಕಲನದಿಂದ)

ಮುಸಲ ವರ್ಷಧಾರೆ
ಮುಗಿಲಿನಿಂದ ಸೋರೆ
ಕುಣಿವ ನವಿಲು ನನ್ನ ಮನಂ
ನಲ್ಮೆಯುಕ್ಕಿ ಮೀರೆ।

ಹಸುರು ಬಯಲ ಮೇಲೆ
ಬಾಣ ಜಾಲದೋಲೆ
ಮಳೆಯ ಹನಿಗಳೆರಗಲೊಡಂ
ತುಂತುರಾವಿ ಲೀಲೆ।

ತಲೆಯ ಕೆದರಿ ಕಾಳಿ
ಕುಣಿವ ತರೆನ ತಾಳಿ
ಪವನ ಹರಿಯು ಗರ್ಜಿಸಿಹಂ
ವಿಪಿನ ಕರಿಯ ಸೀಳಿ।

ನೀನು, ನೀರು ನೀನು
ಕಾರುತಿಹುದು ಕಾರು
ನೋಡುತಿರುವ ಕವಿ ನಯನಂ
'ನಂದದಿಂದೆ ನೀರು'।

# 84 ಹಕ್ಕಿಗಳ ಸಂಗದಲಿ

– ಕುವೆಂಪು

ಹಕ್ಕಿಗಳ ಸಂಗದಲಿ
ರೆಕ್ಕೆ ಮೂಡುವುದೆನಗೆ
ಹಾರುವುದು ಹೃತ್ಪಕ್ಷಿ
ಲೋಕಗಳ ಕೊನೆಗೆ ।

ಹಾರಿ ಲೋಕದ ಕೊನೆಗೆ
ರಸದ ಪೈರಿನ ಮನೆಗೆ
ಬಾಣದಂತೆರಗುವುದು
ಹಾಲು ಜೇನ್ದನೆಗೆ

ಅಲ್ಲಿ ಮೂಡುವುದು ರವಿ
ಆದರೀ ರವಿಯಲ್ಲ।
ಅಲ್ಲಿ ಹಾಡುವನು ಕವಿ
ಈ ಕವಿಯು ಅಲ್ಲ।

ಕೇಳಿದರೆ, ಹೃತ್ಪಕ್ಷಿ
ಮೌನವನೆ ಹಾಡುವುದು
ಮೂಕ ಸುಂದರ ಅಕ್ಷಿ
ಎದೆಯ ಕಾಡುವುದು।



# 11. ಸೃಷ್ಟಿ ಚೆಲುವು

– ನಾಗೇಂದ್ರ ನಾಯಕ ತೊರ್ಕೆ
(ಗುಬ್ಬಿಗೂಡು ಕವನ ಸಂಕಲನದಿಂದ)

ಅರಳುತಿಹ ಸುಮಕುಲವು ಕಂಪು ಸೂಸುತಿಹವು
ಭ್ರಮರಗಳು ಹಾರಾಡುತಿಹವು ಸೃಷ್ಟಿ ಚೆಲುವ ಸವಿಯ ಬನ್ನಿ॥

ಚಿಗುರುತಿಹ ಮಾಮರವು ತಂಗಾಳಿ ಸುಖಕರವು
ಚಿಲಿಪಿಲಿ ಪಕ್ಷಿ ಸಾಗರವು ಸೃಷ್ಟಿ ಚೆಲುವ ಸವಿಯ ಬನ್ನಿ
ತೆಂಗು ಕಂಗು ಬಾಳೆ ತೋಟದಲಿ ಹಸಿರು ಬನಸಿರಿಯ ಮಡಿಲಲಿ
ಕೋಗಿಲೆಯು ಹಾಡುತಿರಲು ಸೃಷ್ಟಿ ಚೆಲುವ ಸವಿಯ ಬನ್ನಿ॥

ಜುಳುಜುಳು ನದಿ ಹರಿಯುತಿರಲು ಚೆಲುವ ತಡಸಲು ಧುಮುಕುತಿರಲು
ಬೆಟ್ಟ ತಪ್ಪಲು ನೀಲ ಮುಗಿಲು ಸೃಷ್ಟಿ ಚೆಲುವ ಸವಿಯ ಬನ್ನಿ॥

ಭೋರ್ಗರೆವ ಸಾಗರವು ಸಾಗರ ಚುಂಬಿತ ರವಿ ತೇಜವು
ಉತ್ತರದಿ ಹಿಮ ಶಿಖರವು ಸೃಷ್ಟಿ ಚೆಲುವಿನ ನೆಲೆ ಈ ಇಳೆಯು॥
ಸೃಷ್ಟಿ ಚೆಲುವ ಸವಿಯ ಬನ್ನಿ॥

## 12. ಹರಿವ ತೊರೆ ತೀರದಲಿ

– ಶ್ಯಾಮಲಾ ಹೆಗಡೆ ಶಿರಸಿ
(ಅವರ ಸಂಗ್ರಹದಿಂದ)

ಹರಿವ ತೊರೆ ತೀರದಲಿ ಎಲೆ ಹಸಿರು ಬಳ್ಳಿಯಲಿ
ಅರಳು ನೀ ಪುಷ್ಪವಾಗಿ
ಬೆಳಗು ಮುಂಜಾವದಲಿ ಅರಸುತ್ತ ಬನದಲ್ಲಿ
ನಾ ಬರುವೆ ಭೃಂಗವಾಗಿ ॥

ದೂರ ಅಂಗಣದಲ್ಲಿ ನೀಲಿ ಆಕಾಶದಲಿ
ಮೂಡು ನೀ ಚುಕ್ಕೆಯಾಗಿ ಬಾನ ವಿಸ್ತಾರದಲಿ
ಹುಣ್ಣಿಮೆಯ ರಾತ್ರಿಯಲಿ ನಾ ಬರುವೆ ರಜನಿಯಾಗಿ॥

ಸೃಷ್ಟಿಯಾ ಸೊಬಗಿನಲಿ ಸೌಂದರ್ಯ ರಾಶಿಯಲಿ
ಮೂಡು ಕವಿತೆಯಾಗಿ ನಿನ್ನಲೆ ನಾ ಬೆರೆತು
ನನ್ನನೇ ನಾ ಮರೆತು ಹಾಡುವೆನು ನಾ ಕವಿಯಾಗಿ॥



## 83 ಮಳೆಬಿಲ್ಲು

– ಕುವೆಂಪು

ನೋಡಲ್ಲಿ ಮೂಡಿಹುದು ಮುಗಿಲಿನಲ್ಲಿ ಮಳೆಬಿಲ್ಲು
ಬಾನ್ದೇವಿಯಾಂತ ಮಣಿಹಾರದಂತೆ
ಮೂಕವಿಸ್ಮಿತನಾಗಿ ನಿಲ್ಲು ಗೆಳೆಯನೆ, ನಿಲ್ಲು
ಗುಡಿಯೆದುರು ಕೈಮುಗಿದು ಭಕ್ತನಂತೆ।

ಚೆಲುವಿಕೆಯ ಚೈತನ್ಯ ಬಿಲ್ಲಾದುದೆಂಬಂತೆ,
ಮಾಯೆ ಬರೆದಿಹ ಮಧುರ ಚಿತ್ರದಂತೆ,
ಆದಿಕವಿ ಹಾಡುತಿಹ ನಲ್ಗಬ್ಬವೆಂಬಂತೆ
ವೈಣಿಕನು ಮೀಟುತಿಹ ಬೀಣೆಯಂತೆ।

ಮಳೆಬಿಲ್ಲಿನಂತೆಮ್ಮ ಬಾಳು ಚಣವಾದರೇನು?
ಮಳೆಬಿಲ್ಲಿನಂತೆಯದು ಮಧುರತಮವಲ್ಲವೇನು?
ಮಹಿಮೆಯಾ ಜೀವಿತವದೊಂದು ದಿನವಾದರೇನು?
ಹೀನವಾಗಿಹ ಬಾಳು ಯುಗ ಯುಗಗಳಿದ್ದರೇನು?

ಹೊರಗಿರುವ ಪರಿಯೆಲ್ಲ ಅಡಗಿಹುದೇ ಒಳಗೆ।
ಹುಡುಕಿದರೆ ಕೀಲಿಕೈ ಸಿಗದೆ ಎದೆಯೊಳಗೆ
ತಿಳಿಯದ್ದೆಲ್ಲದರಲ್ಲಿ ಕುಳಿತಿರುವೆ ನೀನೆ, ಎನ್ನುವರು
ನನಗೀಗ ಸೋಜಿಗವು ನಾನೆ ।

## 82 ಪರಾಗ

–ದ.ರಾ. ಬೇಂದ್ರೆ

(ಸಖೀಗೀತ ಕವನ ಸಂಕಲನದಿಂದ)

ಬಾ ಭೃಂಗವೆ ಬಾ, ವಿರಾಗಿಯಂದದಿ
ಭ್ರಮಿಸುವಿ ನೀನೇಕೆ ?
ಕಂಪಿನ ಕರೆಯಿದು ಸರಾಗವಾಗಿರೆ
ಬೇರೆಯ ಕರೆ ಬೇಕೆ?

ಬರಲಿಹ ಕಾಯಿಯ ಪಾಡಿನ ರುಚಿಯೂ
ಇದರೊಳು ಮಡಗಿಹುದು
ನಾಳಿನ ಹಣ್ಣಿನ ರಸವಿಲ್ಲಿಯ ಮಕ–
ರಂದದೊಳಡಗಿಹುದು

ಕವನ ಕೋಶದಿ ಕಮಲ ಗರ್ಭದಲ್ಲಿ
ಪರಾಗವೊರಗಿಹುದು
ನಿನ್ನ ಮುಖಸ್ಪರ್ಶವೂ ಸಾಕು, ಹೊಸ
ಸೃಷ್ಟಿಯೆ ಬರಬಹುದು



## 13. ಕಡಿಯ ಬೇಡಿರಣ್ಣ ಮರವ

– ರಾಜೀವ ಅಜ್ಜೀಬಳ

(ಮೇದಿನಿ ಕವನ ಸಂಕಲನದಿಂದ)

ಕಡಿಯಬೇಡಿರಣ್ಣ ಕಡಿಯಬೇಡಿ ಮರವ
ಹೊಸಕಿ ಹಾಕಬೇಡಿ ಭೂತಾಯಿಯ ಚೆಲುವ
ಕಡಿಯ ಬೇಡಿರಣ್ಣ ಮರವ।

ಮಣ್ಣು ನೀರು ಸೇರಿ ಭೂಮಿಗಿತ್ತ ನಗುವ
ಗಾಳಿಜೋಗುಳವ ಹಾಡಿ ತೂಗುತಿರುವ ಮಗುವ
ಕಡಿಯ ಬೇಡಿರಣ್ಣ ಮರವ॥

ಪರಿಸರಕೆ ಗಂಧವೀವ ಗಾರುಡಿಗ ದ್ರುಮವ
ತಂಪು ನೆರಳು ಮಳೆಯ ಕರುಣಿಸುವ ವರವ
ಕಡಿಯ ಬೇಡಿರಣ್ಣ ಮರವ।

ಹೊನ್ನ ಬೆಳಕ ಬರೆವ ಅಪರೂಪದ ಪದವ
ನಾಡಿನಂದ ಹೆಚ್ಚಿಸುವ ಸದಾ ಹಸಿರ ಸಿರಿಯ
ಕಡಿಯ ಬೇಡಿರಣ್ಣ ಮರವ॥

## 14. ಬನಸಿರಿ

ಬನಸಿರಿ ಪ್ರಕೃತಿಯ ವರದಾನ
ಸಂಪನ್ಮೂಲದ ಉಗ್ರಾಣ
ವನ್ಯ ಜೀವಿಗಳಿಗೆ ಆಶ್ರಯಧಾಮ
ಗಿಡಮೂಲಿಕೆಗಳ ರಸ ತಾಣ, ರಸತಾಣ, ರಸತಾಣ॥

ಕಾಡು ಮಾನವ ಸಂಬಂಧ
ಬೆಳೆದಿದೆ ಎಷ್ಟೋ ಯುಗದಿಂದ
ಕಾಡಿನ ಗರ್ಭದಿ ಬಂದವರು
ಕಾಡಿನ ಮಡಿಲಲಿ ಬೆಳೆದವರು ॥1॥

ವನಗಳೇ ಮುಕ್ತಿಯ ತಾಣಗಳು
ಬದುಕಿಗೆ ಶಕ್ತಿಯ ಕೇಂದ್ರಗಳು
ಕಾಡುಗಳಿಲ್ಲದೇ ನಾಡಿಲ್ಲಾ
ಕಾಡೇ ನಮ್ಮೊಡನಾಡಿಗಳು ॥2॥

ಹಸಿರೇ ಉಸಿರು ಎನ್ನೋಣ
ಹಸಿರಿನ ಮಡಿಲಲಿ ಬೆಳೆಯೋಣ
ಮನೆಮದ್ದಿನ ಗಿಡ ಬೆಳೆಯೋಣ
ಹಸಿರಿನೆಡೆಗೆ ಸಾಗಲಿ ಪಯಣ ॥3॥



ಅಲ್ಲಿ ಇವೆ ಕಾಜಾಣ, ಕೋಗಿಲೆ, ತೇನೆ, ಗಿಳಿ, ಕಾಮಳ್ಳಿಯು;
ಕಂಪೆಸೆವ ಸೀತಾಳಿ, ಕೇದಗೆ, ಬಕುಳ, ಮಲ್ಲಿಗೆ ಬಳ್ಳಿಯು
ನೀಲಿ ಬಾನಲಿ, ಹಸುರು ನೆಲದಲಿ, ಕಂಗಳರೆಡನೆ ಬಲ್ಲವು
ಅಲ್ಲಿ ಸಗ್ಗವೆ ಸೂರೆ ಹೋಗಿದೆ, ನಂದನವೆ ನಾಡೆಲ್ಲವು।

ನೆಳಲುಗತ್ತಲೆ ತೀವಿದಡವಿಯ ಹೊದುರ ಹಳುವಿನ ಸರಲಲಿ
ಹುಲಿಯ ಗರ್ಜನೆ, ಹಂದಿಯಾರ್ಭಟ, ಕಾಡುಕೋಳಿಯ ಚೀರುಲಿ
ದೊಡ್ಡು, ಕಡ, ಮಿಗ, ಮುಸಿಯ, ಕೋಡಗ, ಎರಳೆ, ಸಾರಗ, ಬರ್ಕವು
ಹಾವು, ಉಡ, ಕಣೆಹಂದಿ, ಚಿಪ್ಪಿನ ಹಂದಿ, ಮುಂಗುಸಿ ಕುರ್ಕವು

## 81. ಈ ಬಾನು ಈ ಚುಕ್ಕಿ

**– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ**

ಈ ಬಾನು ಈ ಚುಕ್ಕಿ, ಈ ಹೂವು ಈ ಹಕ್ಕಿ
ತೇಲಿ ಸಾಗುವ ಮುಗಿಲು ಹರುಷವುಕ್ಕಿ
ಯಾರು ಇಬ್ಬರು ಇವನು ಹೀಗೆ ಇಲ್ಲಿ।
ತುದಿ ಮೊದಲು ತಿಳಿಯದೀ ನೀಲಿಯಲಿ

ಒಂದೊಂದು ಹೂವಿಗೂ ಒಂದೊಂದು ಬಣ್ಣ
ಒಂದೊಂದು ಜೀವಕೂ ಒಂದೊಂದು ಕಣ್ಣ
ಯಾವುದೊ ಬಗೆಯಲ್ಲಿ ಎಲ್ಲರಿಗೂ ಅನ್ನ
ಕೊಟ್ಟ ಕರುಣೆಯ ಮೂಲ ಮರೆತಿಹುದು ತನ್ನ

ನೂರಾರು ನದಿ ಕುಡಿದು ಮೀರದ ಕಡಲು
ಬೋರೆಂದು ಸುರಿಸುರಿದು ಆರದ ಮುಗಿಲು
ಸೇರಿಯು ಕೋಟಿ ತಾರೆ ತುಂಬದ ಬಯಲು
ಯಾರದೀ ಮಾಯೆ ಯಾವ ಬಿಂಬದ ನೆರಳು ?

## 80. ಹೋಗುವೆನು ನಾ

– ಕುವೆಂಪು (ಪಕ್ಷಿಕಾಶಿ ಕವನ ಸಂಕಲನದಿಂದ)

ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ
ಮಲೆಯನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ
ಹಸಿರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕಾಡಿಗೆ।

ಬೇಸರಾಗಿದೆ ಬಯಲು ಸೀಮೆಯ ಬೋಳು ಬಯಲಿನ ಬಾಳಿದು
ಬಿಸಿಲು, ಬೇಸಗೆ, ಬೀಸುವುರಿಸಕೆ, ತಾಳಲಾರದ ಗೋಳಿದು
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ
ಬಿಳಿಯ ತಿಂಗಳ ಸಿರಿ ಬನಂಗಳ ಮಲೆಯ ಮಂಗಳ ನಾಡಿಗೆ।

ಅಲ್ಲಿ ಇಂತಿರುಬೇಕು, ಇಂತಿರಬಾರದೆಂಬುವುದಿಲ್ಲವೈ
ಅಲ್ಲಿ ಹೊರೆ ಹೊಣೆಯಿಲ್ಲ, ಶಾಸ್ತ್ರದ ವಿಧಿ ನಿಷೇಧಗಳಿಲ್ಲವೈ
ಜಾತಿಗೀತಿಯ ವೇದಬೆಧದ ಕಟ್ಟುಕಟ್ಟಳೆ ನಿಲ್ಲದೈ
ಅಲ್ಲಿ ಪ್ರೀತಿಯ ನೀತಿ, ಧರ್ಮಕೆ ಬೇರೆ ಭೀತಿಯೆ ಸಲ್ಲದೈ।

ಅಲ್ಲಿ ತೆರೆತೆರೆಯದ್ರಿ ಪಂಕ್ತಿಗಳೆಲ್ಲ ಕಾಣದೆ ಹಬ್ಬಿವೆ
ನಿಬಿಡ ಕಾನನರಾಜಿ ಗಿರಿಗಳನ್ನಪ್ಪಿ ಸುತ್ತಲು ತಬ್ಬಿವೆ
ದೆಸೆಯ ಬಸವನ ಹಿಣಿಲ ಹೋಲಿವೆ ಮುಗಿಲ ಚುಂಬನಗೈದಿವೆ
ತುಂಗ ಶೃಂಗಗಳಲ್ಲಿ ದಿಕ್ತಟದಲಿ ಸೊಂಡಿಲ ನೆಯ್ದಿವೆ ।

ರವಿಯ ರಶ್ಮಿಯ ಪ್ರಜ್ಞೆಯಿಲ್ಲದ ವಿಪಿನ ನಿರ್ಜನ ರಂಗಕೆ
ಮುಗಿಲನಂಡಲೆಯುತ್ತ ನಿಂತಿಹ ಧೀರ ಪರ್ವತ ಶೃಂಗಕೆ
ವನ ವಿಹಂಗಸ್ವನ ತರಂಗಿತ ಪವನ ಪಾವನ ಸಂಗಕೆ
ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ ।



## 15 ನಿಲ್ಲಿ ಮೋಡಗಳೆ

– ಜಿ.ಎಸ್. ಶಿವರುದ್ರಪ್ಪ

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ
ದಿನವು ದಿನವು ಕಾದು ಬಾಯಾರಿ ಬೆಂದೆ
ಬೆಂಗದಿರ ತಾಪದಲ್ಲಿ॥

ನನ್ನೆದೆಯ ಹಸಿರ ಉಸಿರು ಕುಗ್ಗಿದರು
ಬರಲಿಲ್ಲ ನಿಮಗೆ ಕರುಣ
ನನ್ನ ಹೃದಯದಲಿ ನೋವು ಮಿಡಿಯುತಿದೆ
ನಾನು ನಿಮಗೆ ಶರಣ ॥1॥

ಬಡವಾಗದ ನನ್ನ ಒಡಲುರಿಯ ಬೇಗೆ
ನಿಮಗರಿವು ಆಗಲಹುದೇ?
ನೀಲಗಗನದಲಿ ತೇಲಿ ಹೋಗುತಿಹ
ನಿನ್ನ ಬೆಳೆಯಬಹುದೇ ॥2॥

ಓ ಬನ್ನಿ ಬನ್ನಿ ಓ ಬನ್ನಿ ಬನ್ನಿ
ನನ್ನೆದೆಗೆ ತಂಪ ತನ್ನಿ
ನೊಂದ ಜೀವರಿಗೆ ತಂಪ ನೀಯುವದೇ
ಪರಮ ಪೂಜೆಯೆನ್ನಿ ॥4॥

## 16 ಮುಂಗಾರಿನ ಅಭಿಷೇಕ

ಮುಂಗಾರಿನ ಅಭಿಷೇಕಕೆ
ಮಿದುವಾಯಿತು ನೆಲವು
ಧಗೆ ಆರಿದ ಹೃದಯದಲಿ
ಪುಟಿದೆದ್ದಿತು ಚೆಲುವು ।

ಬಾಯಾರಿದ ಬಯಕೆಗಳಲಿ
ಥಳಥಳಿಸುವ ನೀರು
ಕಣ್ಣಿಗೇ ತಣ್ಣಗೆ ಮುತ್ತಿಡುತಿದೆ
ಪ್ರೀತಿಯಂಥ ಹಸಿರು॥

ಮೈಮನಗಳ ಕೊಂಬೆಯಲ್ಲಿ
ಹೊಮ್ಮುವ ದನಿಯಿಂತೋ
ನಾಳೆಗೆ ನನಸಾಗುವ ಕನಸಿನ
ಹೂವ ಅರುಳುವ ಕಂಪು
ಅರಳುವ ಕಂಪು॥

ಭರವಸೆಗಳ ಹೊಲಗಳಲ್ಲಿ
ನೇಗಿಲ ಗೆರೆ ಕವನ
ಶ್ರಾವಣದಲಿ ತೆನೆದೂಗುವ
ಜೀವೋತ್ಸವದ ಗಾನ
ಜೀವೋತ್ಸವದ ಗಾನ ॥



## 79 ವಸಂತ

ಪರಿಮಳದ ತಂಗಾಳಿ ಹರಿದಾಡಿತು
ದುಂಬಿಗಳ ಸಂಗೀತ ಮೊದಲಾಯಿತು
ಬಿರಿದರಳ ಬಣ್ಣಗಳ ಹೊಳೆ ಹರಿಯಿತು
ಚೈತ್ರ ವೈಶಾಖ–ವಸಂತ ಋತು

ಮೃದು ವಸಂತದ ಮುದ್ದು ಬೆರಳು ಮೊಗ್ಗಿನ ಕಣ್ಣ
ತೆರೆದು ಅರಳಾಗಿಸುವ ವೇಳೆಯಲ್ಲಿ
ಎಳೆಬಿಸಿಲ ಹೊದಿಕೆಲಿ ನಗಲು ಚಿಗುರಿದ ತೋಟ
ಬಗೆಬಗೆಯ ಪರಿಮಳದ ಜ್ವಾಲೆಯಲ್ಲಿ

ತಿಂಗಳೊಂದರ ಹಿಂದೆ ಹಸಿರು ಪತ್ತಲವುಟ್ಟು
ಕಂಗಳಿಗೆ ತಂಪಾಗಿ ಹೊಳೆದ ಮಾವು
ಇಂದೇಕೊ ಕೋಪದಲಿ ಕೆಂಪಿನುಡುಗೆಯನುಟ್ಟು
ಕಾಲದಾಚೆಗೆ, ದೇಶದಾಚೆಗೆ, ಚಿಂತೆಯಾಚೆಗೆ ಹಾರುವೆ
ಕಾವ್ಯಕನ್ಯಾ ಶ್ರಾವ್ಯಕಂಠದೊಳಾತ್ಮಭೂತಿಯ ಸಾರುವೆ।

ನಗರ ನಾಗರಿಕತೆಯ ಗಲಿಬಿಲಿ ಅಲ್ಲಿ ಸೋಂಕದು, ಸುಳಿಯದು
ದೇಶದೇಶದ ವೈರಯುದ್ಧದ ಸುದ್ದಿಯೊಂದು ತಿಳಿಯದು
'ತಿಳಿಯದಿರುವುದೆ ತಿಳಿವು' ಎಂಬುವ ನನ್ನಿ ಆಯೆಡೆ ತಿಳಿವುದು
'ತಿಳಿಯ ನೋವಿರೆ, ತಿಳಿಯದಿರುವುದ ಜಾಣ್ಮೆ ಎಂಬರಿವುಳಿವುದು

ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ
ಮಲೆಯನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ
ಹಸಿರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ।

## 78 ಋತು ವೈಭವ

– ಕೆ.ಎಸ್. ನರಸಿಂಹಸ್ವಾಮಿ

(ತೆರೆದ ಬಾಗಿಲು ಕವನ ಸಂಕಲನದಿಂದ)

ಕಳೆದ ಕಾಲ, ಇರುಳ ಕಾಲ, ಬರುವ ಕಾಲ, ಕಾಲ
ವರುಷಕಾರು ಋತುಗಳೆಂದು ನುಡಿಯುತಿಹನು ಬಾಲ
ಒಂದು ಋತುವಿಗೊಂದು ರೂಪ, ರಾಗ, ಭಾವ, ತಾಳ
ಒಂದೆ ಹೊಳೆಯ ನೀರಿನಲ್ಲಿ ಬೇರೆ ಬೇರೆ ಆಳ

ಕಾಲಚಕ್ರ ಉರುಳುತಿದೆ, ಗಾಳಿ ಮೊರೆದು ಹೊರಳುತಿದೆ
ಗೆಜ್ಜೆಸದ್ದು ಹೆಜ್ಜೆನೆರಳು ದಾರಿಯುದ್ದಕೂ
ಅರ್ಧ ಸುಖ, ಅರ್ಧ ದುಃಖ ಬಾನ ಕಡೆಗೆ ತೆರೆದ ಮುಖ
ತಾಯ ಸೆರಗ ಹಿಡಿದ ಕಂದ ದಾರಿಯುದ್ದಕೂ

ಬಾಳ ತೊಡಕು ಬೆಳೆಯುತಿದೆ, ಗೆಲುವಿನಲ್ಲಿ ಹರುಷವಿದೆ;
ಚಕ್ರ ತಿರುಗಿದಂತೆ ವರುಷ ದಾರಿಯುದ್ದಕೂ
ಋತುಗಳಾರು ಪುಟಗಳಾರು ವರುಷವೆಂಬ ಕವಿತೆಗೆನೆ
ಬೇರೆ ರಾಗ ಬೇರೆ ತಾಳ ದಾರಿಯುದ್ದಕೂ

ಬೆಟ್ಟ ನಿಂತು ನೋಡುತಿದೆ, ಹರಿವ ನೀರು ಹಾಡುತಿದೆ,
ಎಲೆಯ ಮರೆಯ ಹಕ್ಕಿಯಿಂಪು ದಾರಿಯುದ್ದಕೂ
ಸಾವಿರಾರು ಹೂವ ಬಣ್ಣ ಸಂಜೆಯ ಮುಗಿಲಿನೆದೆಯ ಚಿನ್ನ
ತಾರೆಗಣ್ಣ ಬೆಳಕ ರನ್ನ ದಾರಿಯುದ್ದಕೂ



## 17 ಹಸಿರು ಪಯಣ

ಬನ್ನಿ ಬನ್ನಿ ಗೆಳೆಯರೇ ಬನ್ನಿ ಬನ್ನಿ ಎಳೆಯರೇ
ಕೈ ಕೈ ಹಿಡಿಯುವಾ
ಬೆಟ್ಟ ಗುಡ್ಡ ಸುತ್ತಿ ಬಳಸಿ ದೂರ ದೂರ ಸಾಗುವಾ
ಬಲುದೂರ ದೂರ ಸಾಗುವಾ॥

ದೂರ ದೂರ ದೂರ ಸೇರಿ ಹಸಿರು ಬನವ ಸೇರುವಾ
ಬನವ ಸುತ್ತಿ ಕೈ ಹಿಡಿದು ಹಸಿರುಗೀತೆ ಹಾಡುವಾ
ಗಾಳಿಯಂತೆ ತೇಲುವಾ ದೂರ ಗಗನ ಸೇರುವಾ
ಹಕ್ಕಿಯಂತೆ ಪುಕ್ಕವಿರಿಸಿ ಟುವಿಟುವಿ ಹಾಡುವಾ॥1॥

ಸ್ವಚ್ಛವಾಗಿ ಕೇಕೆ ಹಾಕಿ ನಗುತ ನಲಿದು ಓಡುವಾ
ನವಿಲಿನಂತೆ ಕುಣಿಯುವಾ ಜಿಂಕೆಯಂತೆ ಜಿಗಿಯುವಾ
ರಮ್ಯ ಪ್ರಕೃತಿ ನಮ್ಮ ತಾಯಿ ನಮ್ಮ ಜನ್ಮ ದಾಯಿನಿ
ಹರುಷ ಕೊಡುವ ಚೇತನದದಲಿ ಹರಸು ಎಂದು ಬೇಡುವಾ ॥2॥

# 18. ಕೊಡಗಿನ ಕಾವೇರಿ

ಕಾವೇರಿ ನೀ ಬೆಡಗಿನ ವಯ್ಯಾರಿ
ಕನ್ನಡ ಕುಲನಾರಿ ಕಾವೇರಿ
ಕಾವೇರಿ ನೀ ಒಲವಿನ ಸಿಂಗಾರಿ॥

ಕೃಷಿ ಜನಜೀವನ ತಪೋನಿಧಿ
ಕಾವೇರಿ ನೀನೆ ಜೇನಿನ ಜೀವನದಿ
ರೈತರ ಪಾಲಿನ ಭಾಗ್ಯನಿಧಿ
ಕಾವೇರಿ ನೀ ನಡೆಯುವ ನೆಲವೆಲ್ಲಾ ಪುಣ್ಯದ ಸನ್ನಿಧಿ॥

ಹಾಲಿನ ಅಲೆಯಾಗಿ ಹಾಡೋಳೆ
ಕಾವೇರಿ ನೀ ಬಾಳಿನ ಸುವ್ವಾಲೆ ಹಾಡೋಳೆ
ಚಿನ್ನದ ನಾಡಿನ ಹೊನ್ನಾಲೆ
ಕಾವೇರಿ ನೀ ನವರಸವಾಹಿನಿ ಗಿರಿಬಾಲೆ॥

ಗಂಧದ ಸೀಮೆಯ ಸೌಂದರ್ಯ ಲಹರಿ
ಕಾವೇರಿ ನೀ ಗಂಧರ್ವ ಗಾನದ ಆನಂದ ಲಹರಿ
ಪತಿತ ಪಾವನ ಅಮೃತ ಲಹರಿ
ಕಾವೇರಿ ನೀ ಲಲಿತ ಲತಾ ಸಿಂಗಾರಿ॥



ಸಿಳ್ಳೆಯ ಹಕ್ಕಿಯ ಕೂಗನು ಕೇಳಿ
ಕಾಡಿನ ಮಲ್ಲರ ಹರಟೆಯ ನೋಡಿ
ಒಂದೆಲೆ ಮರೆಯಲ್ಲೂ ಹಕ್ಕಿ ಗೂಡಿದೆ
ಒಣಗಿದ ಮರದಲ್ಲೂ ಮರಿಗಳ ಕೂಗಿದೆ।
ನಮ್ಮಯ ಕಾಡಿನ ಹಾಡಿದು ಕೇಳಿ
ಕಡಲಲೂ ತುಂಬಿದೆ ತ್ಯಾಜ್ಯವೇ ನೋಡಿ
ಕತ್ತಲ ಗವಿಯಲ್ಲೂ ಬೆಳಕಿನ ಸೆರಗಿದೆ
ನಮ್ಮದೇ ನಾಡಿದು ನಮ್ಮದೇ ಕೈಲಿದೆ।

# 77 ಪುಷ್ಪರಹಿತ ಉದ್ಯಾನ

ಪುಷ್ಪರಹಿತ ಉದ್ಯಾನದ ಧ್ಯಾನದ ಹೃದಯದ ಅಧಿದೇವಿ
ಹಸಿರೆಲೆಯಂಚಿಗೆ ಅರಿಸಿನ ಚೆಲ್ಲಿದ ಮಂಗಳ ವನದೇವಿ

ಮೇಲೆಯಿರದ ಮುಗಿಲಿಲ್ಲದ ನೀಲದ ತಾರಾಧೂಳಿಯಲಿ
ತಿಂಗಳ ಬೆಳಕಿನ ತಂಪನು ಹರಡುವ ಕುಡಿನೋಟವ ಬೀರಿ
ಧೂಳಿಲ್ಲದ ಹೂವಿಲ್ಲದ ಬಯಲಿನ ಶಾಂತಿ ಸೆರಗಿನಲಿ
ಹರುಷದಿಂದ ತುಳುಕಾಡುವ ಕಂಗಳ ಮೌನದ ಬೆಡಗಿನಲಿ

ಕಣ್ಣ ತೊಳೆವೆ ಕಾಡಿಗೆಯನು ಹಚ್ಚುವೆ ಮಂಕು ಹರಿಯಲೆಂದು
ಚೆಲುವ ಬಾಳ ಕಾಣಿಸುವೆನು ಈಗಲೆ ಒಳಗೆ ಬನ್ನಿರೆಂದು
ಹಾದಿ ಬೀದಿಯಲಿ ಬಂದಳು ಹಾಡುತ ಶಾರದೆ ಬಂಗಾರಿ
ತೂಗುವ ಹಳದಿಯ ತೆನೆಗಳ ಮಿಡಿಯುತ ಋತುಗಳ ಸಿಂಗಾರಿ

ಕಪ್ಪೆಗಳ ಸಂಗೀತಕೂಟಕೆ ಹಾವುಗಾಳಿಗಿವೆ ಅತಿಥಿ
ತರಗೆಲೆ ಸದ್ದೇ ಉರಗದ ಸಂಗಾತಿ।
ಮಳೆಕಾಡ ಸಿಳ್ಳಾರಕೆ ಸಾಟಿ ಬೇರಿಲ್ಲ
ಮಳೆಯಲಿ ಜೀರುಂಡೆ ಸ್ಪರ್ಧೆಯಾಗಿದೆಯಲ್ಲಾ।
ಕಾಣದ ಕೀಟವು ಕೇಳುವಂತೆ ಅರಚಿದೆ
ನೀರವ ನಿಶೆಯ ಅರಿವಿಗೆ ತಂದಿದೆ।
ಮೌನದ ಪಯಣವ ಗೂಬೆಯು ತೋರಿದೆ
ಪಿಸುಮಾತಿನ ಬಗೆಯ ತಂಗಾಳಿಯು ಹೇಳಿದೆ ।
ನಿಸರ್ಗದ ಸಂಗೀತ ಪಾಠ ನಡೆದಿದೆ..

## 76 ಬನ್ನಿ ಮಾನವರಾಗೋಣ

**– ರಕ್ಷಾ ಕೆ. ವಾಸುದೇವ (ಅರಣ್ಯ ಮಹಾವಿದ್ಯಾಲಯ, ಶಿರಸಿ)**

ಬನ್ನಿ ಮಾನವರಾಗೋಣ
ನಮ್ಮಯ ಪರಿಸರ ತಿಳಿಯೋಣ;
ತೇಗ–ಗಂಧದ ಗೂಡಿದು ಕೇಳಿ
ಮುತ್ತುಗ ಬಿರಿದಿದೆ ಬೆಂಕಿಯ ನೋಡಿ
ಬೀಟೆಯ ಬಿಳಿ ಹೂ ಮಳೆಯನು ಸುರಿಸಿದೆ
ಆಲದ ಹಣ್ಣಲಿ ಕಣಜದ ಬಾಳಿದೆ॥
ಮರಗಳ ಮೌನದ ಮಾತನು ಕೇಳಿ
ಹಾವಸೆ ಶಿಲೀಂದ್ರದ ಜೊತೆಯನು ನೋಡಿ
ಜೇಡದ ಬಲೆಗೆ ಇಬ್ಬನಿ ಶೃಂಗಾರ ಮಾಡಿದೆ
ಹರಿಯುವ ನೀರಿಗೆ ಕೀಟದ ಸ್ವರ ಕೂಡಿದೆ॥



## 19 ಈ ಹಸಿರು ಸಿರಿಯಲಿ

ಈ ಹಸಿರು ಸಿರಿಯಲಿ ಮನಸು ಮೆರೆಯಲಿ ನವಿಲೇ
ನಿನ್ನಾಂಗೇ ಕುಣಿವೇ ನಿನ್ನಂತೆಯೇ ನಲಿವೆ ನವಿಲೇ ನವಿಲೆ
ಈ ನೆಲದ ನೆಲೆಯಲಿ ಕನಸು ಸುರಿಯಲಿ ನವಿಲೇ
ನೀನೇನೆ ನಾನಾಗುವೆ ಗೆಲುವಾಗೆ ಉಲಿವೆ ನವಿಲೇ ನವಿಲೆ॥1॥

ತಂಗಾಳಿ ಬೀಸಿ ಬರದೆ ಸೌಗಂಧಾ ಸುಖವ ತರದೇ
ಚಿಗುರೆಲೆಯು ಎಲ್ಲಿ ಮರವೇ ನಿನ್ನ ಗೆಳತಿ ನಾನು ಮೊರೆವೆ
ತಂಗಾಳಿ ಬೀಸಿ ಬರದೇ ಸೌಗಂಧಾ ಸುಖವ ತರದೇ
ಚಿಗುರೆಲೆಯು ಎಲ್ಲಿ ಮರವೇ ನಿನ್ನ ಗೆಳತಿ ನಾನು ಮೊರೆವೆ॥2॥

ಮತ್ಯಾಕೆ ಮೌನ ಗಿಳಿಯೇ ಸಿಟ್ಯಾಕೆ ಎಂದು ತಿಳಿಯೆ
ಹೊತ್ಯಾಕೆ ಹೇಳು ಅಳಿಲೇ ಗುಟ್ಯಾಕೆ ನನ್ನ ಬಳಿಯೆ
ಹೇಳೀರೆ ನಿಮ್ಮನ್ನ ನಾ ಹ್ಯಾಂಗೆ ಮರೆಯಲೇ ತೊರೆಯಲೇ ॥3॥

## 20. ನಿತ್ಯೋತ್ಸವ...

**– ಕೆ. ಎಸ್. ನಿಸಾರ್ ಅಹಮದ್**

ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ, ನಿನಗೆ... ॥1॥

ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ
ಓಲೆಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ, ತಾಯೆ ನಿತ್ಯೋತ್ಸವ, ನಿನಗೆ... ॥2॥

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೇ,
ಸದ್ವಿಕಾಸಶೀಲ ನುಡಿಯು ಲೋಕಾವೃತ ಸೀಮೆಯೆ
ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ
ನಿತ್ಯೋತ್ಸವ, ತಾಯಿ ನಿತ್ಯೋತ್ಸವ, ನಿನಗೆ... ॥3॥



ಪ್ರಕೃತಿ ಕೊಟ್ಟ ರಸವ
ಉಂಡು ಮನುಜ ಮಾಡಿದ ಕಸವ।
ವಾಸ್ತವ ತಿಳಿದು ಬಳಸುವ ನಾವು
ವಾಸವು ವಿನಾಶವಾಗುವ ಮೊದಲು।
ಎಚ್ಚೆತ್ತುಕೊಳ್ಳುವ ನಾವು
ಕಾಲವು ಉರುಳುತ್ತಿರಲು।
ನಾಲ್ಕು ಗೋಡೆಯ ಮಧ್ಯೆ ಬದುಕು
ಸ್ತಬ್ಧವಾಗುವ ಮೊದಲು ॥
ನಿಸರ್ಗ ಮಾಡಿದ ವಿಜ್ಞಾನ
ಅಂಧರ ಕೈ ಸೇರಿಯಾಗಿದ ಅಜ್ಞಾನ
ಉಳಿವಿನ ಅರಿವು ಅರಿತರೆ ಬಾಳು ಸುಜ್ಞಾನ ॥

## 75 ನಿಸರ್ಗದ ಸಂಗೀತ ಪಾಠ

**– ರಕ್ಷಾ ಕೆ. ವಾಸುದೇವ (ಅರಣ್ಯ ಮಹಾವಿದ್ಯಾಲಯ, ಶಿರಸಿ**

ಮಾವು ಚಿಗುರಲು ಕೋಗಿಲೆ ಹಾಡಿದೆ।
ವಸಂತ ಕಾಯದೆ ಕಾಜಾಣ ಕೂಗಿದೆ!
ಕಾಗೆಯ ಧ್ವನಿಯದು ಕರ್ಕಶವೇನಲ್ಲಾ
ಕೆಂಬೆರಲ ಸ್ವರಮೇಳ ಎದೆಯ ನಡುಗಿಸಿದೆಯಲ್ಲಾ।
ಮಿಂಚುಳ್ಳಿ ರಾಗಕೆ ಮುನಿವರು ಜನರು
ನವಿಲಿನ ಸ್ವರಕೆ ತಲೆದೂಗುವರು।
ಗುಟುರು ಹಕ್ಕಿಗೆ ಆಯಾಸವೇ ಇಲ್ಲ
ಮಡಿವಾಳ ಹಕ್ಕಿಗೆ ವಿಶ್ರಾಂತಿ ಬೇಕಿಲ್ಲ।

ನಿನ್ನ ಮಡಲಿನಲಂದು ಉಸಿರಿನಾ ಗಣಿಯಿತ್ತು
ಬಿರಿದ ಮಲ್ಲಿಗೆಯ ಕಂಪು ಸೂಸಿತ್ತು
ಪಕ್ಷಿಗಳ ಕಲರವವು ಸುತ್ತೆಲ್ಲ ತುಂಬಿತ್ತು
ಕಾನನದಿ ಪ್ರಾಣಿಗಳ ಹಿಂಡು ನಲಿದಿತು ॥

ಮಾನವನ ಬಯಕೆಗಳು ಹೆಚ್ಚಾಗಿ ಹುಚ್ಚೆದ್ದು
ಪರಿಸರದ ಸಹಜತೆಗೆ ಬೆಂಕಿ ಹಚ್ಚಿಹರು
ನಿನ್ನೊಡಲು ಬರಿದಾಗಿ ಮಾಲಿನ್ಯ ತುಂಬಿರಲು
ಉಸಿರಾಡದಂತಾಗಿ ನರಳಿ ಸಾಯುತಲಿಹರು॥

ಉಸಿರಿಗಾಗಿ ಬಸವಳಿದು ಬೆಲೆ ತೆತ್ತುಕೊಂಡಾಗ
ನಿನ್ನ ಹಸಿರಿನ ನೆಲವ ಅರಸಿ ಬಂದಿಹರು
ನಿನ್ನ ಸನಿಹವು ನಮಗೆ ಶಕ್ತಿಯ ಆಗರವು
ಒಂದೊಂದು ಗಿಡ ಬೆಳೆಸಿ ಕಾನನವ ಮಾಡುವೆವು॥

## 74 ನಿಸರ್ಗ ಗೀತೆಗಳು

**ಅಂತ್ಯದ ಮೊದಲು!**

**– ವಿಸ್ಮಯ ಎಂ. (ಅರಣ್ಯ ಮಹಾವಿದ್ಯಾಲಯ, ಶಿರಸಿ)**

ಭೂತಾಯಿಯ ವರವು
ನಮಗಿದು ನೆರವು।
ಸ್ವಾರ್ಥವ ತೊರೆದು
ಬೆಳೆಸುವ ಕಾನು।
ಬದುಕಿದು ನಮ್ಮದು
ನಶಿಸುವ ಮೊದಲು ।

ಮಳೆ ಬಿಸಿಲುಂಡ ನೆಲವು
ತಣಿಸುವುದು ನಮ್ಮ ದಣಿವು।



## 21. ವನದೇವತೆ ಪೂಜೆಗೆ

ಬನ್ನಿರಿ ಬನ್ನಿರಿ ಪುಣ್ಯದ ಕೆಲಸಕೆ ವನದೇವತೆಯ ಪೂಜೆಗೆ
ನೋವನು ನುಂಗುತ ನಗುನಗುತಿರುವ ಪ್ರಕೃತಿಮಾತೆಯ ಸೇವೆಗೆ॥

ಮರವನು ಕಡಿದರೆ ಕಾಡೇಇಲ್ಲ ಕಾಡುಗಳಿಲ್ಲದೇ ಮಳೆಯೇ ಇಲ್ಲ
ಮಳೆಯು ಬಾರದೇ ಬೆಳೆಯೇ ಇಲ್ಲ ಬೆಳೆಯಿಲ್ಲದಿರೆ ಬಾಳೆ ಇಲ್ಲ॥

ನಾವು ರಕ್ಷಕರು ರಾಕ್ಷಸರಲ್ಲ ನಾವು ರಕ್ಷಕರು ಭಕ್ಷಕರಲ್ಲ
ಭುವಿಯಿದು ಮನುಜಗೆ ಮಾತ್ರವಲ್ಲ ಎಂಬುದನರಿತರೇ ಸುಖವೇ ಎಲ್ಲ॥

ಸದ್ದುಗದ್ದಲವು ಅಡಗಿ ಉಲಿಯಲಿ ಹಕ್ಕಿ ಹಾಡಿನ ಇಂಚರ
ಸುಖದಿ ಬದುಕಲಿ ಪ್ರಾಣಿ ಸಂಕುಲ ನಳನಳಿಸಲಿ ಈ ಪರಿಸರ॥

ಹಸಿರು ನಮ್ಮ ಉಸಿರು
ಹಸಿರು ನಮ್ಮ ಉಸಿರು, ಹಸಿರು ನಮ್ಮ ಉಸಿರು
ಹಸಿರು ನಮ್ಮ ಉಸಿರು, ಹಸಿರು ನಮ್ಮ ಉಸಿರು॥

ಲತೆಲತೆಗಳಲ್ಲಿ ಘಮಘಮ ಸುಮವು
ಬಿರಿದು ಬಾಗಿ ನಗುತಿರಲು
ಹಸಿರೆಲೆಗಳಲ್ಲಿ ತಿಳಿ ಮರೆಯಲ್ಲಿ
ಹಕ್ಕಿಯ ಹಿಂಡು ಹಾಡುತಿರಲು ॥1॥

ದಟ್ಟ ಕಪ್ಪು ಮೋಡ ಕವಿದು
ಇಳೆಗೆ ಮಳೆಯು ಸುರಿಯುತಿರಲು
ಸಸಿಯ ನೆಟ್ಟು ಮರ ಬೆಳೆಸೀ
ಧರೆಗೆ ಹಸಿರ ಸ್ವರ್ಗ ತರಲು ॥2॥

## 22. ಮಣ್ಣಿಂದ ಕಾಯ ಮಣ್ಣಿಂದ

– ಪುರಂದರ ದಾಸರು

ಮಣ್ಣಿಂದ ಕಾಯ ಮಣ್ಣಿಂದ ಕಾಯ ಮಣ್ಣಿಂದ
ಮಣ್ಣಿಂದ ಸಕಲ ದೇಶಗಳೆಲ್ಲ ಮಣ್ಣಿಂದ ಸಕಲ ವಸ್ತುಗಳೆಲ್ಲ
ಮಣ್ಣ ಬಿಟ್ಟವರಿಗೆ ಆಧಾರವಿಲ್ಲ ಹೊನ್ನಗಳಿಲ್ಲ ಕೇಳಿರಯ್ಯ ॥

ಮಣ್ಣ ಉದಕ ಊಟವಿಯುವುದೋ ಮಣ್ಣು
ಬಣ್ಣ ಬಂಗಾರ ಬೊಕ್ಕಸವೆಲ್ಲ ಮಣ್ಣು
ಉನ್ನತವಾದ ಪರ್ವತವೆಲ್ಲ ಮಣ್ಣು
ಕಣ್ಣು ಮೂರುಳ್ಳನ ಕೈಲಾಸ ಮಣ್ಣು ॥

ಭತ್ತ ಭರಣ ಧಾನ್ಯ ಬೆಳಯೋದೇ ಮಣ್ಣು
ಸತ್ತವರನು ಹೂಳುತಿರುವುದೇ ಮಣ್ಣು
ಉತ್ತಮವಾದ ವೈಕುಂಠವೇ ಮಣ್ಣು
ಪುರಂದರ ವಿಠಲನ ಪುರವೆಲ್ಲಾ ಮಣ್ಣು ॥



ಉದಯಿಸಿದಾಗ ಸೌಮ್ಯ
ಮಧ್ಯದಲಿ ತಾಪ ನಗಣ್ಯ
ಮತ್ತೆ ಸಂಜೆಯಲಿ ಶಾಂತ
ನೀ ಅರಿಯೋ ಕಂದ

ಹಿಗ್ಗದಿರು ಕುಗ್ಗದಿರು
ಬಾಳು ಶಾಶ್ವತವಲ್ಲ
ಮೇಲೇರಿದರೆ ಕೆಳಗಿಳಿಯಬೇಕಲ್ಲ
ಇದನರಿತು ನಡೆದರೆ
ನಿನ್ನ ಬದುಕೇ ಬೆಲ್ಲ ॥

## 73 ಹಸಿರಿನ ಉಸಿರಿದೆ

– ಶ್ರೀಮತಿ ಕಲಾವತಿ ಹೆಗಡೆ
(ಶಿಕ್ಷಕಿ,ಎಚ್.ಪಿ.ಎಸ್. ಹುಲೇಕಲ್)

ಜಗವೆಲ್ಲಾ ನಲುಗಿಹುದು ಈ ಪರಿಯ ಬವಣೆಯಲಿ
ಮಾನವನೆ ಎಸಗಿರುವ ಕ್ರೌರ್ಯ ಕಾರ್ಯದಲಿ
ಹಸಿರಿನಲಿ ಉಸಿರಿದೆ ಎಂಬ ಸತ್ಯವ ಮರೆತು
ಬರಿದು ಮಾಡಿಹರಿಂದು ಈ ನೆಲದ ಸೊಬಗ ॥

ತಾಯೆ ನಿನ್ನಡಿಯಲ್ಲಿ ಸೆರಗೊಡ್ಡಿ ಬೇಡುವೆವು
ಮುನಿಯದಿರು ಈ ಜಗದ ಜನರ ಮೇಲೆ
ಪ್ರಗತಿಯ ಹೆಸರಿನಲಿ ಬರಿದಾಯ್ತು ನಿನ್ನೊಡಲು
ಈಗ ನೆನೆಯುತಲಿಹರು ನಿನ್ನ ಲೀಲೆ ॥

## 72 ದಿನಕರನ ದಿನಚರಿ

– ವೀಣಾ ಪ್ರ. ನಾಯ್ಕ (ಸ.ಕಿ.ಪ್ರಾ ಶಾಲೆ ಕುಪ್ಪಳ್ಳಿ)

ಮೊಗ್ಗಿನ ಮುಂಜಾವು
ಹಿಗ್ಗಿನಲಿ ಮೂಡಿರಲು
ಸುಗ್ಗಿಯ ಕಾಲವಿದು
ಎದ್ದೇಳು ಕಂದ ॥

ಮೂಡಣದಿ ಉದಯಿಸಿದ
ದಿನಕರನ ನೋಡು ನೀ
ಕಲಿವುದೆಷ್ಟಿದೆ ಎಂದು
ಮನವರಿಯೋ ಕಂದ ॥

ಕೆರೆ ತೊರೆಯಲಿ ಹರಿಯುತಿಹ
ನೀರಿನ ಹರಿವು
ಚಿಲುಮೆಯಂತೆ ಚಿಮ್ಮುತಿರಲಿ
ನಿನ್ನ ನಗೆಯ ನಲಿವು ॥

ದಿನ ದಿನವೂ ಉಕ್ಕಲಿ
ನೀರಿನ ಚಿಲುಮೆ
ಇದಕ್ಕೊಂದು ಉತ್ತರ
ನಿನಗಿರಲಿ ಗಿಡ ಬೆಳೆಸೊ ಒಲುಮೆ ॥

ಆಟ ಪಾಠ ನಾಟಕದಿ
ಪ್ರಕೃತಿಯುಳಿಸಲು ಕಲಿ
ವಿಕೃತ ಸ್ನೇಹವ ಬದಿಗೊತ್ತಿ
ಸತ್ಪುರುಷನಾಗೋ ನನ್ನ ಕಂದ ॥



## 23. ಮಳೆಯ ದಯ ಮಾಡೋ

– ಪುರಂದರ ದಾಸರು

ಶ್ರೀರಂಗಾ ಶ್ರೀರಂಗಾ ಶ್ರೀರಂಗಾ
ಮಳೆಯ ದಯ ಮಾಡೋ ಶ್ರೀ ರಂಗಾ ಶ್ರೀರಂಗಾ
ನಿಮ್ಮ ಕರುಣ ತಪ್ಪಿದರೆ ಉಳಿಯದೀ ಈ ಲೋಕ ॥

ಪಶುಜಾತಿ ಹುಲ್ಲೆ ಸಾರಂಗ ಮೃಗಗಳು
ಬಹಳ ಹಸಿದು ಬಾಯಾರಿ ಬತ್ತಿದ ಕೆರೆಗೆ ಬಂದು
ತೃಷೆಗೆಡಹದೇ ತಲ್ಲಣಿಸಿ ಮೂರ್ಚೆಯಗೊಂಡು
ದೆಸೆ ದೆಸೆಗೆ ಬಾಯಿ ಬಿಡುತಿಹವಯ್ಯಾ ರಂಗಾ ॥

ಧಗೆಯಾಗಿ ಇನ್ನೂ ದ್ರವಗೊಂಡಿಹ ಬಾವಿಯ ನೀರು
ಮಗೆಮಗೆದು ಪಾತ್ರೆಯಲಿ ನಾರಿಯರು
ಹಗಲೆಲ್ಲಾ ತರುತಿಹರು ಯೋಚನೆ ಮಾಡುತ್ತಾ
ಬೇಗದಿ ನಲಿ ತರಿಸೋ ವೃಷ್ಟಿಯನು ಹರಿಯೇ॥

ಸಂದುಹೋದವು ದೇಹ ಆಷಾಢ ಶ್ರಾವಣ
ಬಂದಿದೆ ಭಾದ್ರಪದ ಮಾಸವೀಗ
ಇನ್ನೂ ಪುರುಂದರಗೆ ಹೇಳಿ ವೃಷ್ಟಿಯ ತರಿಸೋ
ಸಂದೇಹವಿನ್ನಾಕೆ ॥

## 24. ನದನದಿಗಳ ಗಿರಿವನಗಳ ತಾಯೆ...

– ಕೆ.ಎಸ್. ನರಸಿಂಹಸ್ವಾಮಿ

ನದನದಿಗಳ ಗಿರಿವನಗಳ ತಾಯೆ ಭರತಮಾತೆ
ಓಂಕಾರದ ಝೇಂಕಾರದ ನಿನಗಿದೋ ಶುಭಗೀತೆ

ಹಿಮ ಚುಂಬಿತ ಶಿಖರದಲ್ಲಿ ತಾಯೆ ನಿನ್ನ ನೆಲಸು
ಬಿರುಗಾಳಿಯ ಭಿತ್ತಿಯಿಂದ ನೀ ಎಮ್ಮನು ಹರಸು

ಗಂಗೆಯಮುನೆ ಸಂಗಮದಲಿ ನಿನ್ನ ವೇದಘೋಷ
ದೇವದಾರು ವನಗಳಲ್ಲಿ ನಿನ್ನ ಮಂದಹಾಸ

ವಿಂಧ್ಯಾಚಲ ಗೀತೆಯಲ್ಲಿ ಸಂಧ್ಯಾರುಣ ಛಾಯೆ
ಕಾವೇರಿಯ ತೆರೆಗಳಲ್ಲಿ ಮೀನಾಕ್ಷಿಯ ಮಾಯೆ

ಪರ್ವತಗಳ ಶಿಖರದಿಂದ ಕಡಲಂಚಿನ ತನಕ
ತಾಯೆ ನಿನ್ನ ಮುಕುಟದಿಂದ ಹೊಳೆಯಲಿ ಮಣಿಕನಕ



## 71. ನಮ್ಮ ಪರಿಸರ ಸುಂದರ

–ರೋಹಿತ ಭಟ್ಟ

ಸುಂದರ ಎಷ್ಟೊಂದು ಸುಂದರ
ನಮ್ಮೀ ಪಕೃತಿಯ ಮಂದಿರ ॥ಪ॥

ಪಕ್ಷಿಸಂಕುಲಗಳ ಆಗರ
ನದಿತೊರೆಗಳ ಇಂಚರ
ವನ್ಯ ಪ್ರಾಣಿಗಳ ಹೂಂಕಾರ
ದುಂಭಿಗಳ ಝೇಂಕಾರ ॥1॥

ದಟ್ಟಹಸಿರಿನ ಕಾನನಗಳ ಹಂದರ
ತರುಲತೆಗಳು ಸಾವಿರ ಸಾವಿರ
ಆಗಸದೆತ್ತರ ಹರ ಗಿರಿ ಶಿಖರ
ತಾಯಿ ಭಾರತ ಮಾತೆಗೆ ಶೃಂಗಾರ ॥2॥

## 70. ಏನಿಹುದು ಏನಿಹುದು ನಿನ್ನ ತೀರ

ಏನಿಹುದು ಏನಿಹುದು ನಿನ್ನ ತೀರ
ಕಣ್ಣು ಹಾಯಿಸಿದಷ್ಟು ದೂರ ದೂರ ॥ಪ॥

ಬಾನ ಮುತ್ತಿಕ್ಕುತ್ತಿಹುದು ನಿನ್ನ ಹರಹು
ಜೀವರಾಶಿಗಳ ಆಗರವು ನಿನ್ನ ಮಡಿಲು
ಏನಹುದು ಏನಿಹದು ನಿನ್ನ ತೀರ ॥1॥

ಸೂರ್ಯ ಉದಯದ ಚೆಲುವು ಸವಿದ ಮನಗಳ ತಣಿವು
ತಂಪು ತಂಪಾದ ಗಾಳಿ ಬೀಸುತಿಹುದು ನಿನ್ನ ತಡಿಯು
ಏನಿಹುದು ಏನಿಹುದು ನಿನ್ನ ತೀರ ॥2॥

ಅಲೆಗಳ ಚುಂಬನವು ಬಂಡೆಗಳಿಗೊಂದು ರೋಮಾಂಚನ
ಎಲ್ಲೆಲ್ಲೂ ಭೋರ್ಗರೆತ ಭೀತಿ ಹುಟ್ಟುಸುತಿಹುದು
ಏನಿಹುದು ಏನಿಹುದು ನಿನ್ನ ತೀರ ॥3॥

ಮುತ್ತು ರತ್ನಗಳಿಹವು ನಿನ್ನ ಮಡಿಲಲ್ಲಿ
ಉಪ್ಪು ಉಸುಕಿಹುದು ನಿನ್ನ ದಡದಲ್ಲಿ
ಏನಿಹುದು ಏನಿಹುದು ನಿನ್ನ ತೀರ ॥4॥

ಕೆಂಪು ಕೆಂಪಾದ ರವಿಯು ನಿನ್ನಲ್ಲಿ ಐಕ್ಯವಾಗುತಿಹನು
ಓಕುಳಿಯ ರಂಗು ಚೆಲ್ಲುತಿಹನು ರಸಿಕರ ಹೃದಯ
ತಣಿಸುತಿಹನು
ಏನಿಹುದು ಏನಿಹುದು ನಿನ್ನ ತೀರ ॥5॥



## 25. ವನಸುಮ

– ಡಿ.ವಿ.ಜಿ

ವನಸುಮದೊಳೆನ್ನ ಜೀ..ವನವು ವಿಕಸಿಸುವಂತೆ
ಮನವನುಗೊಳಿಸು ಗುರುವೇ– ಹೇ ದೇವ ॥ಪ॥

ಜನಕೆ ಸಂತಸವೀವ.... ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ ॥

ಕಾನನದಿ ಮಲ್ಲಿಗೆಯು.. ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ... ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ ॥

ಉಪಕಾರಿ ನಾನು ಎ..ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು... ವಿಪುಲಾಶ್ರಯವನೀವ
ಸುಫಲಸುಮಭರಿತ ಪಾ
ದಪದಂತೆ ನೈಜಮಾದೊಳ್ಪಿಂ ಬಾಳ್ವವೊಲು ॥

# 26 ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ

ಕೃಪೆ: ಯೂಟ್ಯೂಬ್

ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ
ಸುಪ್ರಬೋಧ ಚಂದ್ರೋದಯ ರಾಗಾರುಣ ಜ್ವಾಲೆ
ಗಿರಿ ಸಿರಿ ಬನ ಸಂಚಾರಿಣಿ ತುಂಗಾ ಜಲ ಧಾರೆ
ಧಲ ಧಲ ಧಲ ಮೆದು ಹಾಸಲಿ ಗಾನ ಸುಪ್ತಲೋಲೆ ॥

ಮಲೆನಾಡಿನ ಕೋಗಿಲೆಯೇ ಬಯಲನಾಡ ಮಲ್ಲಿಗೆಯೆ
ವಂಗ ವಿಷಯ ಭೃಂಗವೆ ಧವಳಗಿರಿಯ ಶೃಂಗವೆ
ಕಾವೇರಿ.. ಗೋದಾವರಿ.. ಗಂಗೆ ಯಮುನೆ ಸಿಂಧುವೆ ॥

ಶತಶತ ಶತಮಾನಗಳ ಗುಪ್ತಗಾಮಿ ಚೇತನವೇ
ಋತು ಋತುವಿಗೂ ಹೂವಾಗಿ ಫಲವಾಗುವ ತನಿರಸವೇ
ಚಿಲಿಪಿಲಿಯಂಥಾ ಮೋದದಿ ನಲಿದುಲಿವ ಕೂಜನವೇ
ಮಧುರ ಮಂದಾನಿಲ ಸೌಗಂಧದ ಸಿರಿ ಪರಿಮಳವೇ ॥

ನಸು ಹಸುರಿನ ಹಿಮಮಣಿಯೇ
ಎಳೆ ಬಿಸಿಲಿನ ಮೆಲುದನಿಯೇ
ಬಿರಿದ ಮುಗಿಲ ಬಿಂಕವೇ
ತೆರೆದ ಸೋಗೆ ನರ್ತನವೇ ॥



# 69. ಸಹ್ಯಾದ್ರಿಯ ಸಾಲಿನಲಿ

– ಸ್ಮಿತಾ ಗಣಪತಿ ಭಟ್ಟ್

ಕಣ್ಮನ ಸೆಳೆಯುವ ಸಹ್ಯಾದ್ರಿಯ ಸಾಲಿನಲಿ
ಮೈಮರೆಸುವೀ ಸುಂದರ ಪ್ರಕೃತಿಯಲಿ
ತರುಲತೆಗಳು ಹಸಿರಿನ ಮೆರಗಲಿ ಕಂಗೊಳಿಸುತಿರಲು
ಸ್ವರ್ಗವೇ ಧರೆಗಿಳಿದ ಮಲೆಯ ಮಡಿಲಲಿ ॥ಪ॥

ನಯನ ಮನೋಹರ ಹಸಿರು ಕಾಡಿನಲಿ
ಝುಳು ಝುಳು ಹರಿವ ನದಿಯ ನಿನಾದಲಿ
ಖಗಕುಲ ಕಲರವ ಇಂಪಾದ ಸ್ವರ ತುಂಬಿರಲು
ಸ್ವರ್ಗವೇ ಧರೆಗಿಳಿದ ಮಲೆಯ ಮಡಿಲಲಿ ॥2॥

ಸುಯ್ಯೆಂದು ಬೀಸುವ ಶುದ್ಧ ಗಾಳಿ ಪ್ರತಿ ಉಸಿರಿನಲಿ
ದರ್ಪಣವಂದದಿ ಗಂಗೆಯು ಪ್ರತಿ ಗುಟುಕಿನಲಿ
ಜನಿಸಲಿಲ್ಲಿ  ಬೇಕು ಪೂರ್ವ ಜನ್ಮದ ಪುಣ್ಯ
ಸ್ವರ್ಗವೇ ಧರೆಗಿಳಿದ ಮಲೆಯ ಮಡಿಲಲಿ ॥2॥

ಕಾಡಿದ್ದರೆ ನಾಡು ನಾಡಿದ್ದರೆ ಕುಲವು
ಬೇಧಬಾವ ಮರೆತು ಒಂದಾಗಿ ಹಾಡಿ
ಪರಿಸರ ರಕ್ಷಣೆ ಮಾಡೋಣ ಬನ್ನಿ
ಒಂದಾಗಿ ಕೂಗಿ ಹಾಡೋಣ ಬನ್ನಿ ॥5॥

## 68. ಗಿಣಿಯೇ ಗಿಣಿಯೇ

ಗಿಣಿಯೆ ಗಿಣಿಯೆ ಬಣ್ಣದ ಗಿಣಿಯೇ
ಹಣ್ಣನು ಕೊಡುವೆನು ಬಾ ಬಾ ॥ಪ॥

ಹಸಿರು ಪುಕ್ಕದ ಬಣ್ಣದ ಗಿಣಿಯೆ
ಹಾರಲು ಕಲಿಸು ಬಾ ಬಾ ॥1॥

ಹಣ್ಣನು ಕೊಟ್ಟು ಹಾಲನು ಕೊಟ್ಟು
ನೀರನು ಕುಡಿಸುವೆ ಬಾ ಬಾ ॥2॥

ಗಿಣಿಯೇ ಗಿಣಿಯೇ ಬಣ್ಣದ ಗಿಣಿಯೇ
ಹಾರುತ ಬಳಿಗೆ ಬಾ ಬಾ ॥3॥

ಕೆಂಪು ಮೂಗಿನ ಮುದ್ದಿನ ಗಿಣಿಯೆ
ಹಾಡಲು ಕಲಿಸುವೆ ಬಾ ಬಾ ॥4॥

ಮರದಲಿ ಕುಳಿತು ನೋಡುವೆ ಏಕೆ
ಹಾರುತ ಹತ್ತಿರ ಬಾ ಬಾ ॥5॥



## 27 ಪರಿಸರವ ಉಳಿಸೋಣ ಬನ್ನಿರೋ

ನಮ್ಮ ಪರಿಸರವ ಬೆಳೆಸೋಣ ಬನ್ನಿರೋ।
ಸ್ವಚ್ಚ ಪರಿಸರವ ಬೆಳೆಸೋಣ ಬನ್ನಿರೋ॥

ಶುದ್ದ ನೀರು ಸ್ವಚ್ಚ ಗಾಳಿ ಮಾಡೋಣ
ಕಸಕಡ್ಡಿ ಪ್ಲಾಸ್ಟಿಕ್ ತೆಗೆಯೋಣ।
ಸ್ವಚ್ಚ ಪರಿಸರವ ಬೆಳೆಸೋಣ ಬನ್ನಿರೋ॥1॥

ಮನೆಯ ಮುಂದೊಂದು ಮನೆಯ ಹಿಂದೊಂದು
ಸುತ್ತಮುತ್ತವೆಲ್ಲ ಗಿಡ ನೆಡೋಣ।
ನದಿಗಳ ಪಕ್ಕದಲ್ಲಿ ಕಾಡು ಬೆಳೆಸೋಣ
ಜಲಸಂಪತ್ತನ್ನು ಉಳಿಸಿಕೊಳ್ಳೋಣ॥2॥

ಸಿಡಿಮದ್ದು ಪಟಾಕಿ ನಿಷೇಧಿಸೋಣ
ದೀಪವನು ಬೆಳಗಿ ಹಬ್ಬ ಮಾಡೋಣ
ಆರತಿಯ ಬೆಳಗಿ ಹಬ್ಬ ಮಾಡೋಣ॥3॥

ಸ್ವಚ್ಛ ಭಾರತದೆಡೆಗೆ ನಡೆಯೋಣ
ಶುದ್ದ ಪರಿಸರವನು ಮಾಡೋಣ।
ಮುಂದಿನ ಪೀಳಿಗೆಗೆ ಮಾದರಿಯಾಗೋ
ಸ್ವಚ್ಛ ಭಾರತವ ನಿರ್ಮಿಸೋಣ ॥4॥

# 28 ವಸುಂಧರೆಯ ಪೂಜಿಸೋಣ ಬನ್ನಿ

– ಉಮಾಪತಿ ಭಟ್ಟ ಕೆವಿ

ಹಸಿರು ಉಡುಗೆಯ ಸಿಂಗಾರದಲಿ
ಕಂಗೊಳಿಸುತಿಹ ಭೂ ತಾಯ
ಪೂಜಿಸೋಣ ಬನ್ನಿ ॥

ಮಡಿಲಲಿ ತುಂಬಿದೆ ತರುಲತೆ ಮೂಲಿಕೆ ಸಾವಿರ
ರುಜಿನಗಳ ಪರಿಹಾರಕೆ ಅವುಗಳ ಸಾರ
ಮನುಕುಲಕೆ ಆರೋಗ್ಯ ಭಾಗ್ಯವ ಕರುಣಿಸುವ ॥1॥

ಖಗಕುಲ ಪ್ರಾಣಿ ಸಂಕುಲಕೆ ವನಫಲ
ಸಾಸಿರವರುಷದಿ ಬಂದಿಹ ಹಸಿರು ಫಲ
ಮನುಜರ ಬಾಳಿಗೆ ಹರುಷವ ಕೊಡುವ ॥2॥

ಜುಳು ಜುಳು ನಾದ ನಿನಾದದ ಗಾನ
ಹರಿಯುವ ನದಿಗಳ ಯಾನ ಮೈಮನ ಸಿಂಚನ
ಸಕಲ ಜೀವಕೂ ಜೀವಜಲವ ನೀಡುವ ॥3॥

ಗಿರಿಕಂದರ ಮೇರು ಶಿಖರ ಹಸಿರಿನ ಸಿರಿಕಲಶ
ಋಷಿಮುನಿಗಳ ತಪಸಿನ ತಪೋಭೂಮಿ ಆವಾಸ
ಮನುಕುಲದೇಳ್ಗೆಗೆ ವರವನು ಕರುಣಿಸುವ ॥4॥

ಧರೆಗವತರಿಸಿದೆ ನಮ್ಮೀ ಹಸಿರಿನ ನೆಲವು
ಬೆಳೆದಿದೆ ಇಲ್ಲಿ ಹಿರಿಮೆಯ ಮನುಕುಲವು
ಹಸಿರನು ಬೆಳೆಸುತ ಹಸಿರುಮಾತೆಗೆ ನಮಿಸೋಣ ॥5॥



# 67. ಪರಿಸರ ಸಂರಕ್ಷಣೆ

–ಗೀತಾ ಜೋಶಿ

ಬನ್ನಿ ಕೂಡಿ ಹಾಡೋಣ
ಪರಿಸರ ರಕ್ಷಣೆ ಮಾಡೋಣ
ಮಂದಿಯ ಮನದಲಿ ಅರಿವನು ಮೂಡಿಸುತ
ಪರಿಸರ ರಕ್ಷಣೆ ಮಾಡೋಣ ॥ಪ॥

ಪ್ರಕೃತಿಯು ತಾನು ಹಸಿರ ಸೀರೆಯನುಟ್ಟು
ಕಂಗೊಳಿಸಿ ಅಂದು ಶೋಭಿಸುತ್ತಿತ್ತು
ಕೀಳು ಮಾನವನಿಂದು ಸ್ವಾರ್ಥಕ್ಕೆ ಬಲಿಯಾಗಿ
ಬೆತ್ತಲೆಯಾಗಿಸಿಹ ವನದೇವಿಯನ್ನು ॥1॥

ಎಲ್ಲಿ ನೋಡಿದರಲ್ಲಿ ಬರಿದಾದ ಭೂಮಿಯು
ಗಿಡಮರಗಳಿಲ್ಲದೇ ನಶಿಸುತಿದೆಯಿಂದು
ಕೇಳುವವರಾರು ಮೂಕ ವೇದನೆಯೊಂದ
ಹೊತ್ತು ಕುಳಿತಿಹಳು ಭೂದೇವಿಯು ॥2॥

ಶುಚಿಯಾದ ಗಾಳಿ ನೀರಿನ ಕೊರತೆಯ
ಸರಿದೂಗಿಸಲಾದಿತೇ ಪರಪಂಚಕಿಂದು
ಪಶುಪಕ್ಷಿ ಕೀಟಗಳ ನಾಶವ ತಡೆಯಲು
ಬರಬಹುದೇ ದೇವನು ಈ ಕಾರ್ಯಕೆ ನೊಂದು ॥3॥

ನಾಡ ಉಳಿಸಲು ಕಾಡಬೇಕೆಂಬ ಜ್ಞಾನ
ಮನುಜನಿಗೆ ತಿಳಿಯ ಪಡಿಸುವವರಾರು
ಎಲ್ಲಡೆ ಸಸಿಯ ಬೆಳೆಸುತ ನಾವು
ಉಳಿಸೋಣ ಪ್ರಕೃತಿಯ ಹರಿಸುತ ಬೆವರು ॥4॥

# 66. ಸೂರ್ಯನ ಪ್ರೀತಿಸು

– ಎಚ್.ಆರ್.ಕೆ

ಸೂರ್ಯನ ಪ್ರೀತಿಸು ಮಣ್ಣನು ಪ್ರೀತಿಸು
ಪ್ರೀತಿಸು ಆಗಸ ಮಳೆಗಳನು ॥ಪ॥

ಮರವನು ಪ್ರೀತಿಸು ಗಿಡವನು ಪ್ರೀತಿಸು
ಉಣಿಸಲು ನೀಡುವ ಸಸ್ಯವನು॥
ನಮಗೆ ಉಣಿಸಲು ನೀಡುವ ಸಸ್ಯವನು॥

ಪ್ರಾಣಿಯ ಪಕ್ಷಿಯ ಕೀಟವನು
ಸುಂದರ ವರ್ಣದ ಶಿಲ್ಪಿಯನು
ಎಲ್ಲವೂ ಭೂಮಿಯ ಜೀವಿಗಳೇ
ತಮ್ಮದೇ ಪಾತ್ರದ ಜಂತುಗಳೇ ॥1॥

ಮನುಜರು ಭೂಮಿಯ ಅಂಶವೂ ಮಾತ್ರವೆ
ಜೀವಿಯನಾಳುವ ದೊರೆಯಲ್ಲ
ಬಾಳಲು ನಾವು ಬಿಟ್ಟು ನಾವು ಬದುಕುವಾ
ಅವುಗಳಿಲ್ಲದೇ ನಾವಿಲ್ಲಾ ॥2॥

ಸರ್ವ ಸ್ವತಂತ್ರರೂ ಯಾರು ಇಲ್ಲಾ
ಎಲ್ಲರೂ ಬೇಕು ಎಲ್ಲರಿಗೂ
ಈ ಭೂಮಿ ಎಲ್ಲರಿಗಾಗಿ
ಈ ಭೂಮಿ ಎಲ್ಲರಿಗಾಗಿ
ಈ ಭೂಮಿ ಎಲ್ಲರಿಗಾಗಿ ॥3॥



# 29 ಭೂ ವನದ ಮಧುಗಂಗೆ ನನ್ನೆಡೆಗೆ ಬಾ

– ಜಿ.ವಿ ಕುಲಕರ್ಣಿ

ಭೂವನದ ಮಧುಗಂಗೆ ನನ್ನೆಡೆಗೆ ಬಾ
ಕಾದಿರುವೆ ಸೋತಿರುವೆ ತೃಷೆ ತಣಿಸು ಬಾ॥

ಕಲ್ಲೆದೆಯೂ ನಿನ್ನಿಂದ ಅರಳಾಗಲಿ
ಕತ್ತಲೆಯೂ ನಿನ್ನಿಂದ ದೂರಾಗಲಿ
ನೀ ಕಲ್ಪತರು ನನ್ನ ಮನ ದೇವತೆ
ನಿನ್ನಿಂದ ಫಲವುಂಟು ಶ್ರಮಜೀವಿಗೆ ॥1॥

ನೀನಲ್ಲದಿರೆ ಜಗವು ಭಣಗುಡುತಿದೆ
ಮನ ನಿನ್ನ ದರುಶನಕೆ ಕಣ್ಣ ಬಿಡುತಿದೆ
ಗಾಳಿ ತುಂತುರ ಹನಿಯ ಸಿಂಪಡಿಸಿತು
ದಾಹ ಹೆಚ್ಚಲು ದಾಹ ಹೆಚ್ಚಲೂ ಗಗನ ಜರವಾಯಿತು ॥2॥

ವಿಷನುಂಗಿ ಜಗಕೆ ಅಮೃತಾ ಹಂಚುವೆ
ಮೈತುಂಬಾ ನಡೆ ಬಾಣ ರಸ ಹರಿಸುವೆ
ತಾನೂ ತರು ಜಗವ ನಗಿಸುತ್ತಿರುವೆ
ಆಸೆ ಕುಡಿಯ ಮೇಲೆ ಹೂವೆಳಸುವೆ ॥3॥

## 30 ಪ್ರಕೃತಿ ಮಾತೆಯೇ ಸುಂದರ

**–ಸೌಮ್ಯ ಹೆಗ್ಗಡಹಳ್ಳಿ, ಗುಂಡ್ಲುಪೇಟೆ**

ಪ್ರಕೃತಿ ಮಾತೆಯೇ ಸುಂದರ
ಜಗವೇ ಮಂದಿರ ॥

ಬೆಟ್ಟವಿರಲಿ ಗುಡ್ಡವಿರಲಿ
ನದಿತೊರೆಗಳು ಹರಿಯುತಿರಲಿ।
ಗಿಡಗಳಿರಲಿ ಮರಗಳಿರಲಿ
ಪ್ರಕೃತಿ ಮಾತೆಯೇ ನೀ ಬಲು ಸುಂದರ ॥1॥

ಹೊಳೆಯೆ ಇರಲಿ ಕೆರೆಯೆ ಇರಲಿ
ಮೀನು ಕೊಕ್ಕರೆ ಈಜುತಿರಲಿ।
ಜಲಚರ ಪ್ರಾಣಿಗಳೆ ಇರಲಿ
ಪ್ರಕೃತಿ ಮಾತೆಯೇ ನೀ ಬಲು ಸುಂದರ ॥2॥

ಖಗಗಳಿರಲಿ ಮೃಗಗಳಿರಲಿ
ಕಾಡು ನಾಡುಗಳು ಇರಲಿ।
ಪಕ್ಷಿಪ್ರಾಣಿಗಳು ಎಲ್ಲಾ ಇರಲಿ
ಪ್ರಕೃತಿ ಮಾತೆಯೇ ನೀ ಬಲು ಸುಂದರ ॥3॥

ಸೂರ್ಯ ಚಂದ್ರ ಬೆಳಗುತಿರಲಿ
ಇರುಳು ತಾರೆ ಮಿನುಗುತಿರಲಿ।
ಭುವಿಯು ಹಚ್ಚ ಹಸಿರಾಗಿರಲಿ
ಪ್ರಕೃತಿ ಮಾತೆಯೇ ನೀ ಬಲು ಸುಂದರ ॥4॥



## 65. ನವಿಲು

**– ಪವಿತ್ರ ಕೃಷ್ಣ ಮೂಡ್ಸಳ್ಳಿ**

ಓ ನವಿಲೇ ಓ ನವಿಲೇ
ನನ್ನ ಜೊತೆ ಬಾ ನವಿಲೇ
ನಿನ್ನ ಹಾಗೆ ನಾನು ಕುಣಿವೆ ॥ಪ॥

ಓ ನವಿಲೇ ಓ ಓ ಓ..........
ಓ ನವಿಲೇ ಓ ಓ ಓ..........
ಓ ನವಿಲೇ ಬಾ ನವಿಲೇ
ನಿನ್ನ ಜತೆ ನಾನು ಕುಣಿದು ಕೂಗುವೆ

ನೀ ಗರಿ ಬಿಚ್ಚಿ ನಾಟ್ಯ ಮಾಡುವೆ
ನಾ ಕಣ್ತುಂಬ ನಿನ್ನ ನೋಡುವೆ
ನೀ ಬಾರೆ ನನ ಜತೆ ನೀ ನಾಟ್ಯ ಕಲಿಸಿಕೊಡೆ
ಕಲಿಸು ಬಾರೆ ನವಿಲೆ ಕಲಿಸು ಕಲಿಸು
ಬಾರೆ ನವಿಲೇ ಓ ನವಿಲೆ ॥

ನಿನ್ನ ಆ ಕಣ್ಣು ಬಲು ಚಂದಾನೆ
ನಿನ್ನ ನಾಟ್ಯ ಬಲು ಅಂದಾನೆ
ನೀನೊಮ್ಮೆ ಕಣ್ಮುಂದೆ ಬಾರೆ ನವಿಲೇ
ನಿನ್ನ ಮೈ ಬಣ್ಣ ಬಲು ಸೋಜಿಗಾನೆ ನವಿಲೆ
ಬಲು ಸೋಜಿಗಾನೆ ನವಿಲೆ॥

ನಿನ್ನ ಆ ಧ್ವನಿ ಬಹಳ ಇಂಪಾಗಿದೆ
ನಿನ್ನ ಮೈ ಮಾಟ ನನ ಸೆಳೆಯುತಿದೆ
ನೀ ತೋರೆ ನಿನ್ನ ಮೊಗವಾ ತೋರು ಬಾರೆ
ನವಿಲೇ ತೋರು ತೋರು ಬಾರೆ ನವಿಲೆ॥

## 64. ಪೇಡ ಲಗಾವೊ (ಹಿಂದಿ ಹಾಡು)

– ಸಂಗ್ರಹ : ಸೌಖ್ಯ ಹೆಗಡೆ ಹೆಗಡೆಕಟ್ಟಾ

ಪೇಡ ಲಗಾವೊ ಪೇಡ ಲಗಾವೊ
ದುನಿಯಾ ಕೋ ಖುಷ್ ಹಾಲ ಬನಾವೊ
ಸಬ ಝೂಮ್ ಝೂಮ್ ಕೇ ನಾಚೋ ಗಾವೊ
ಪೇಡ ಲಗಾವೊ ಪೇಡ ಲಗಾವೊ ॥ಪ॥

ಪೇಡೋಂ ಸೇ ಮಿಲತೀ ಹೈ ಛಾಯಾ
ಔರ್ ಮಿಲತೇ ಹೈ ಮೀಠೆ ಫಲ್
ಆಕ್ಸಿಜನ್ ಹಮ್ ಕೋ ದೇತೆ ಹೈ
ಪಂಛೀಯೋಂ ಕೋ ಭಿ ಮಿಲತಾ ಹೈ ಘರ್ ॥1॥

ಪೇಡೆ ಹೈ ಜೀವನ್ ಕಾ ಆಧಾರ್
ಪೈದೆ ಇನಕೇ ಕಹಿ ಹಜಾರ್
ಅಗರ್ ಪೇಡ್ ನ ಲಗಾವೊ ಗೆ ತೋ
ಪೈದೆ ಕೈಸೆ ಪಾವೋಗೆ ॥2॥



## 31. ಹಕ್ಕಿಯ ಹಾಡಿಗೆ ತಲೆದೂಗುವ ಹೂ..

– ಕೆ. ಎಸ್. ನರಸಿಂಹಸ್ವಾಮಿ

ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ
ಹಸುವಿನ ಕೊರಳಿನ ಗೆಜ್ಜೆಯ ದನಿಯು ನಾನಾಗುವ ಆಸೆ

ಹಬ್ಬಿದ ಕಾಮನ ಬಿಲ್ಲಿನ ಮೇಲಿನ ಮುಗಿಲಾಗುವ ಆಸೆ
ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ ಮಿಂಚಾಗುವ ಆಸೆ

ತೋಡದ ಕಂಪಿನ ಉಸಿರಲಿ ತೇಲುವ ಜೇನಾಗುವ ಆಸೆ
ಕಡಲಿನ ನೀಲಿಯ ನೀರಲಿ ಬಳುಕುವ ಮೀನಾಗುವ ಆಸೆ

ಸಿಡಿಲನು ಕಾರುವ ಬಿರುಮಳೆಗಂಜದೆ ಮುನ್ನಡೆಯುವ ಆಸೆ
ನಾಳೆಯ ಬದುಕಿನ ಇರುಳಿನ ತಿರುವಿಗೆ ದೀಪವನಿಡುವಾಸೆ

ಮಣ್ಣಿನ ತೊಡುಗೆಗೆ ನೋವಿಗೆ ನಲಿವಿಗೆ ಕನ್ನಡಿ ಹಿಡಿವಾಸೆ
ಮಾನವ ಹೃದಯದ ಕರುಣೆಗೆ ಒಳವಿಗೆ ದನಿಗೂಡಿಸುವಾಸೆ

## 32 ವರ್ಷಧಾರೆ

– ಭಾರತಿ ಜಿ. ಭಟ್, ನೀರಕೋಣೆಮನೆ

ವರ್ಷಧಾರೆ ಸುರಿಯೆ ಇಳೆಗೆ ಹರ್ಷ ಪಡೆಯುತಿರಲೀ ಧರೆ
ದಣಿದ ಧರೆಯು ಜಲವನುಂಡು ತಂಪ ಸೂಸೆ ಎಲ್ಲೆಡೆ॥

ಅನ್ನದಾತ ಮುಗಿಲನೋಡಿ ಬೇಡುತ್ತಿದ್ದ ಆ ವರುಣನ
ವರ್ಷಧಾರೆ ಭುವಿಗೆ ಸುರಿಯೇ ಹರ್ಷಗೊಂಡು ತನುಮನ॥

ಗರಿಯ ಬಿಚ್ಚಿ ಕುಣಿಯೇ ನವಿಲು ಮಳೆಯು ಬರಲು ಭೂಮಿಗೆ
ಹಸಿರನುಟ್ಟು ಮೆರೆವನೆಂಬ ಹೆಮ್ಮೆ ಹೊಮ್ಮಲು ವಸುಧೆಗೆ॥

ಜೀವ ಜಲವು ಭುವಿಗೆ ಬರಲು ನಲಿಯೇ ಜೀವ ಸಂಕುಲ
ಸಕಲ ಜೀವಿಗಿದುವೇ ಮೂಲ ಉಸಿರು ಹಸಿರು ಜಲಫಲ॥

## 33. ಯಾವ ನೆಲದ ಗಂಧ ಗಾಳಿ

ಕೃಪೆ : ಯೂಟ್ಯೂಬ್

ಯಾವ ನೆಲದ ಗಂಧ ಗಾಳಿ ಮಣ್ಣ ಕಂಪ ತೀಡಿತೋ
ಯಾವ ಧರೆಗೆ ವರ್ಷಧಾರೆ ಫಲಿಸಿ ಚಿಗುರು ತಂದಿತೋ
ಅದೇ ಎನ್ನ ಜನ್ಮಭೂಮಿ ಅದೇ ಎನ್ನ ಪುಣ್ಯಭೂಮಿ॥

ಬಾನಿನಿಂದ ಇಳಿದ ಗಂಗೆ ಯಾವ ನೆಲದಿ ಹರಿದಳೋ
ತೇಗ ಗಂಧ ತರುಗಳೆಲ್ಲಾ ಯಾವ ಬನದಿ ಅರಳಿತೋ
ಹಿಮದ ಗಿರಿಯ ಧವಳ ಮಾಲೆ ಯಾರ ಕೊರಳ ಬಳಸಿತೋ॥
ಅದೇ ಎನ್ನ ಜನ್ಮಭೂಮಿ ಅದೇ ಎನ್ನ ಪುಣ್ಯಭೂಮಿ ॥



## 63. ಮಳೆಯಪ್ಪ ಮಳೆರಾಯ

ಮಳೆಯಪ್ಪ ಮಳೆರಾಯ ಕರೆಯುತಾರೋ ನಿನ್ನ
ಹೇ ಹೇ ಹೇ ಕರೆಯುತಾರೋ ನಿನ್ನ ॥ಪ॥

ಮೂಡಲ ಸೀಮೆಗೆ ಹೋಗಿ ಬಾರೋ ಮಳೆರಾಯ
ಕಗ್ಗಲ್ಲಾದ ನನ್ನ ತವರಿಗೆ ಹೋಗಿ ಜಗ್ಗಿಸಿ ಹುಯ್ಯೋ ಮಳೆರಾಯ॥1॥

ಮೊದಲ ಸೂರಿಗೆ ರೈತರು ಹೊಲದಾಗ ಫಲವಿತ್ತು
ಕೈಯಾ ಮುಗಿದಾರ ॥2॥

ಭತ್ತ ಬಂತಣ್ಣ ಮುತ್ತಿನ ಕಂಬ ಹಾಕೆನಿ
ಬಿತ್ತಿಬಂದೆ ಶಿವನೇ ಮಳೆಯಿಲ್ಲ ಅಂದಾರ
ಮುತ್ತಿನ ಮಂಜು ಸುರಿದಾವೋ ॥3॥

ಹುತ್ತೇರು ಕಟ್ಟಿ ಮತ್ತೆ ಬಾರೋ ಮಳೆರಾಯ
ಮುತ್ತು ಚೆಲ್ಲೈತೆ ಹೊಲಕೆಲ್ಲಾ ಅಂದಾರ
ಮುತ್ತಿನ ಬೆಳೆಯ ಬೆಳೆಯಯ್ಯೋ ॥4॥

ನರುಲಾರ ಗುರುಲಾರ ಓ ಪಂಡಿತ ಪಾಮರುಲಾರ
ಆಯುಃರಾರೋಗ್ಯೆಮುನಿಚ್ಚ ಚೆಟ್ಟು ಕಥನು ವಿನ್ನಾರ
ಪರಿಮಳಿಂಚೆ ಪಚ್ಚಾನಿ ಚೆಟ್ಟು ಅಂದರಿಂಚೆ ಪೋತುನ್ನಾಯಿ
ಪರ್ಯಾವರ್ಣಾನ್ನಿ ಮನಮು ರಕ್ಷಿಂಚಗ ಮುಂದುಗುಪೋತಾಮು॥5॥

## 62. ಕೋಗಿಲೆ ದನಿ

ಕೋಗಿಲೆ ದನಿಯಲಿ ಏನಿದೇಯೆನೋ
ಕೇಳಲು ಮೈಮನ ಮಿಡಿಯುವದು
ಯಾವುದೋ ಮೋಡಿಯ ಹಾಕಿದ ತೆರದಲಿ
ಭಾವನೆ ಪರವಶಗೊಳ್ಳುವದು ॥ಪ॥

ವಸಂತ ಕಾಲವು ಬಂದಿಹ ಸೂಚನೆ
ಕೋಗಿಲೆಯಂದದ ಕೂಗಿನಲಿ
ತರುಲತೆ ತಳೆದವು ವಿಧವಿಧ ಹೂಗಳು
ಬಲು ಮನಮೋಹಕ ರಂಗಿನಲಿ ॥1॥

ತಂಗಾಳಿಯು ಕೊಂಡೊಯ್ಯುತೆ ಸೌರಭ
ನೋಡಲು ತಣಿಸಿದ ಜನಮನವ
ಸ್ವರ ಅನುಭವಿಸುತೆ ತಳೆದು ಪ್ರಸನ್ನತೆ
ಭಾವುಕ ಶಿವಶಿವ ಎಂದೆನುವಾ ॥2॥

ವರುವರುಷದ ಈ ಹರುಷದ ಸಮಯದಿ
ಮುದಗೊಳ್ಳುವ ರವಿಸುತೆ ರಸಿಕ
ಶ್ರಮಿಸಿದ ಫಲವನು ಪಡೆಯುತೆ ನಲಿಯುವ
ನಮ್ಮಿ ಕರುನಾಡಿನ ಕೃಷಿಕ ॥3॥



## 34. ಆಹಾ ಸೊಬಗು ವರ್ಷಧಾರೆ

– ಕಲ್ಪನಾ ಪ್ರಭಾಕರ ಸೋಮನಳ್ಳಿ

ಆಹಾ! ಎಂಥಾ ಸೊಬಗು ನೋಡಬಾರೆ ವರ್ಷಧಾರೆ
ಸ್ವರ್ಗದಿಂದ ಇಳಿದುಬಂದ ಧಾರೆ ಅಮೃತ ಧಾರೆ॥

ಮೋಡದ ನಾಡಿನಲ್ಲೆಲ್ಲಾ ಕಪ್ಪು ಬಿಳುಪಿನ ರಂಗೋಲೆ
ಸುತ್ತೆಲ್ಲಾ ಸುಳಿದಾಡೋ ತಂಪೆರೆಯುವ ಗಾಳಿಯಲೇ॥

ಜೀವ ತಳೆದು ನಳನಳಸಿವೆ ಹಸಿರಿನಿಂದ ಸಸ್ಯಶ್ಯಾಮಲೆ
ಅತ್ತಿದಿತ್ತಣ ತೂಗಾಡುವ ಸಡಗರದುಯ್ಯಾಲೆ ॥

ಮಣ್ಣಿನೊಳು ಅವಿತಿಹ ಬೀಜವೆಲ್ಲ ಮೊಳಕೆಯೊಡೆದು ಕುಂತಿವೆ
ಚೆಂದಾನ ಚೆಂದ ಹೂಗಳೆಲ್ಲ ಅರಳಿ ಕಂಪು ಸೂಸಿವೆ ॥

ಜೀವ ಜೀವಕೆಲ್ಲ ನೋಡು ಹೊಸತು ಕಳೆಯು ತುಂಬಿದೆ
ದುಂಬಿ ಬಾನಾಡಿಗಳೆಲ್ಲಾ ಸಂತಸದಿ ಸವಾರಿ ಹೊರಟಿವೆ॥

ಹಬ್ಬದುತ್ಸಾಹದೊಳು ಕೆಸರಿಗಿಳಿದ ರೈತನು
ಪುಟ್ಟ ಕಂದಮ್ಮಗಳಿಗೆಲ್ಲಾ ಮಳೆ ನೀರೊಳು ಆಟವು ॥

## 35 ಪರ್ಯಾವರಣ

– ಕೆ. ಎಸ್. ಅಗ್ನಿಹೋತ್ರಿ, ಶಿರಸಿ

ಪರಿಸರ ಮಡಿಲ ಸೆರಗಿನ ನೆರಿಗೆ ಪಟ್ಟಿಯ ಲೀಲೆಯಲಿ
ಕೆಂನ್ನೇಸರನ  ಕಿರಣ ಕರವಿದು ಜಗದ ಅಗಲ ಈ ಜಾಲದಲಿ
ಮುಂಜಾವಿನ ಮಂಜುಹನಿಯು ಹಸಿರು ಸಿರಿಯಾ ಶಿರದಲಿ
ಗಂಧ ಭರಿತ ಮಂದಮಾರುತ ಹಸಿರು ಹುಲ್ಲಿನ ನಡುವಿನಲಿ॥

ತಂಪು ಇಂಪಿನ ಕಂಪ ಬೀರುವ ಗಾನಕೋಗಿಲೆ ಗಾಯನ
ತುಂತುರು ಹನಿಯ ಮೇಲೆ ಮೈಮರೆತ ನವಿಲಿನ ನರ್ತನ
ಸ್ವರ್ಗಲೋಕದ ಭಾಗವಿದು ದಿಟ ಎನುತಿದೆ ಈ ಮನ
ಪುಳಕಗೊಂಡಿದೆ  ಈ ಹಸಿರಿನಲಿ ಮೈಮರೆವೆ ಅನುದಿನ॥

ಮೆಲ್ಲಮೆಲ್ಲನೆ ಕಾಲನಿಡುತಿರೆ ಪರಿಸರದ ಪರಿ ದೂರಾದಿದೂರ ವಿಸ್ತಾರ
ಹಸಿರ ಹುಲ್ಲಿನ ಶಿರದಿ ಹೊಳೆಯುವ ಉದಯರವಿಯ ಕಿರಣ ಸಂಚಾರ
ಏಳುಬೀಳಿನ ತೊರೆಯ ಕಿರುದಾರಿಯಲಿ ತಾ ಹರಿವ ನೀರಿನ ಕಲರವ
ಕಾಲವಿದು ಜಗಕೆ ತಿಳಿಸುತಿದೆ ತಿಳಿದಿದೆಯಾ ಓ ಮಾನವ॥

ಮನುಕುಲಕೆ ಪ್ರಕೃತಿಯ ಕೊಡುಗೆ ಅದೆಷ್ಟು ಎಂಬುದು ತಿಳಿದೆಯಾ
ಅನುದಿನವು ನಿತ್ಯ ನಿರಂತರ ತ್ಯಾಗವೀಯುವ ಭೂ ತಾಯಿಯ।
ತಾನು ಪಡೆಯದೇ ಜಗಕೆ ನೀಡುವ ಜೀವ ತಳೆವುದ ಬಲ್ಲೆಯಾ
ಜೀವ ಜಗಕಿದು ಜೀವತುಂಬುವ ನಮಿಪೆ ನಾ ಪ್ರಕೃತಿಯಾ॥



## 61. ಚೆಟ್ಟಮ್ಮ ಚೆಟ್ಟಮ್ಮ ಪಚ್ಚಾನಿ ಚೆಟ್ಟಮ್ಮ

(ತೆಲುಗು ಹಾಡು) ಕೃಪೆ: ಯೂಟ್ಯೂಬ್

ಚೆಟ್ಟಮ್ಮ ಚೆಟ್ಟಮ್ಮ ಪಚ್ಚಾನಿ ಚೆಟ್ಟಮ್ಮ
ನಿವು ಲೇಕ ಮಾನವ ಮನುಗಡ
ಲೇನೆ ಲೇದೋಯಮ್ಮ ॥ಪ॥

ಇಂಟಿಂಟಿ ಗುಮ್ಮಮು ಲೋನ ತೋರಣಾಲ ಆಕೈನಾವು
ಪೆಳ್ಳಿಲು ಪಂಡುಗಲು ವಸ್ತೇ ಪಲಿಕರಿಂಚೆ ಪಂದಿರಿ ವೈನಾವು
ನಿಂಡು ಮುತ್ತೈದವುಲಾಗ ಇಂಟಿಮುಂದ ಇಲವೈನಾವು
ಚುಟ್ಟಾಲು ಪಕ್ಕಾಲು ವಚ್ಚನ ಚಿರುಗಾಲಿತೊ ಪಲಕರಿಂಚಿನಾವು ॥1॥

ಆಕಲೆಸ್ತೆ ಅಮ್ಮೈ ವಚ್ಚಿ ಕಡುಪುನಿಂಡೆ ಪಂಡೈನಾವು
ನಿದ್ರಲೋಸ್ತೆ ಉಯಲಗೈ ಗಾಲೀನಿಳ್ಳ ಜೂಲಿಪಾಡಿನಾವು
ಎಂಡೋಚ್ಚಿನ ವಾನೋಚ್ಚಿನ ಗುಂಡೇಲೇನೆ ದಾಲ್ವಿಕೊನ್ನಾವು
ನಿ ಗುಣಮುಲುಗೋರೆಂತ್ಯೆನ ಮನುಷಲಕು ಲೆದೋಯಮ್ಮ ॥2॥

ಪದ್ದುನ್ನೆ ಜುಂಟನಿಚೇಸೆ ಪಂಡ್ಲುತೋಮೆ ಗುಲ್ಲೈನಾವು
ಅಂಡಕುಂಡ ಪುರುಡು ಪೂಯೇಗೆ ಪೊಯಿಲೋನ ನಿಪ್ಪೈನಾವು
ಅಮ್ಮಮ್ಮ ತಾತಯ್ಯಲಕು ತೋಡು ನಡಚೆ ಕರ್ರೈನಾವು
ಕುಚುಂಟೆ ಕುರ್ಚೈನಾವು ಕುನುಕೊಸ್ತೆ ಮಂಚಮೈನವು ॥3॥

ಪರಲು ಸೇವೆ ಮುಖ್ಯಮು ಅಂಟು ಶಿರಸುವಂಚಿ ಮುಂದು ನಡೆಚಿನವು
ಚಲಿಪೋತೆ ಪಾಡೈನಾವು ಕಾಲ್ಚೆಸ್ತೆ ಕಾಡೈನಾವು
ದಹನಮು ದಾನಮು ಇಚ್ಚಿ ನೀ ದೇಹಂಕಾಲ್ಚಿಕೊನ್ನವು
ಎಂತಗೊಪ್ಪ ತ್ಯಾಗಮೆ ನೀದಿ ಓ ಪಚ್ಚಾನಿ ಚೆಟ್ಟಮ್ಮ ॥4॥

## 59. ತಾಯೇ ನಿನ್ನ ಮಡಿಲಲಿ

**– ಎಂ.ಎನ್ ಲಕ್ಷ್ಮೀನಾರಾಯಣ ಭಟ್ಟ್**

ತಾಯೇ ನಿನ್ನ ಮಡಿಲಲಿ ಕಣ್ಣ ತೆರೆದ ಕ್ಷಣದಲಿ
ಸೂತ್ರವೊಂದು ಬಿಗಿಯಿತೆಮ್ಮ ಸಂಬಂಧದ ನೆಪದಲಿ ॥ಪ॥

ಆಕಸ್ಮಿಕವೆನೋ ತಿಳಿಯೇ ನಿನ್ನ ಕಂದನಾದುದು
ಆಕಸ್ಮಿಕ ಹೇಗೋ ನಿನ್ನ ಪ್ರೀತಿ ನನ್ನ ಗೆದ್ದುದು
ಋಣಕೆ ಮಣಿದು ನಾನು ನಿನ್ನ ಚರಣ ತಲಕೆ ಬಿದ್ದುದು ॥1॥

ಇಲ್ಲಿ ಹರಿವ ಪುಣ್ಯ ಜಲ ಕಣ್ಣ ತೊಳೆವ ಹಸಿರು ಕುಲ
ಮಣ್ಣಿನಿಂದ ಹೊರಟ ಗಂಧ ನನ್ನ ಬದುಕ ತೆರೆದವು
ಮೈಯ ಎಲ್ಲ ಕಣಕಣದಲೂ ನಿನ್ನ ಋಣವ ಬರೆದವು ॥2॥

## 60. ಪ್ರಕೃತಿಯೇ ಗುರು

**– ಕಾವ್ಯಾನಂದ (ಸಿದ್ಧಯ್ಯ ಪುರಾಣಿಕ)**

ಪ್ರಕೃತಿಯೇ ಗುರು ಗಗನವೇ ಲಿಂಗವು
ಜಗವೆ ಕೂಡಲ ಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ॥

ಕುಡಿವ ನೀರೆ ತೀರ್ಥ ತಿನ್ನುವ
ರೊಟ್ಟಿ ಶಿವ ಪ್ರಸಾದವು
ಶ್ರಮದ ಬೆವರೇ ಸ್ನಾನ ದುಡಿತದ
ಹಾಡೆ ಮಂತ್ರನಿನಾದವು ॥



## 36 ಮುಂಗಾರಿನ ಸಿಂಗಾರ

**– ಡಿ. ಎಂ. ಭಟ್ಟ ಕುಳವೆ**

ಮುಂಗಾರು ಮಳೆರಾಯ ಆಷಾಢದಲೆ ಧರೆಗಿಳಿದು ಬಂದ
ಇಳೆಯ ತಣಿಸಲು ವರುಣನಪ್ಪಣೆಯ ಆದೇಶ ತಂದ
ಗುಡುಗು ಸಿಡಿಲಿನ ಮಿಂಚು ಆಡಂಬರದ ಅಬ್ಬರ
ಕಪ್ಪೆಗಳ ವಟವಟ ಪಕ್ಷಿಗಳ ಕಲರವದ ಸಡಗರ॥

ಕೋಗಿಲೆಯ ಜೊತೆಗೂಡಿ ನವಿಲು ನರ್ತನ ಮಾಡೆ
ಕವಿಹೃದಯದಿ ಶೃಂಗಾರದ ಕವನಗಳು ಒಡಮೂಡೆ
ಮುಂಗಾರಿನ ಸಿಂಗಾರಕೆ ಕಟ್ಟೆ ಸ್ನೇಹದಾ ತೋರಣ
ಹಸಿರು ಹೊದಿಕೆಯಲಿ ನೋಡು ಭೂತಾಯ ಔತಣ॥

ಹಸಿರಾಗಿ ಚಿಗುರೊಡೆಯಿತು ನವ ವಧುವಿನಂತೆ ಶ್ರೀವನ
ಜೀವಜಂತು ಜನುಮ ಪಡೆಯೆ ಕುಣಿದಾಡಿತು ಕಾನನ
ಎಲ್ಲೆಲ್ಲೂ ವಿಹಂಗಮ ಮಣ್ಣ ಪರಿಮಳ ಗಮಗಮ
ಜುಳುಜುಳು ಹರಿವ ನಾದಕೆ ಮೊದಲಾಯ್ತು ಸರಿಗಮ॥

## 37. ಇಳಿದು ಬಾ ತಾಯಿ...

**– ಅಂಬಿಕಾತನಯದತ್ತ**

ಇಳಿದು ಬಾ ತಾಯಿ.. ಇಳಿದು ಬಾ
ಹರನ ಜಡೆಯಿಂದ.. ಹರಿಯ ಅಡಿಯಿಂದ
ಋಷಿಯ ತೊಡೆಯಿಂದ .. ನುಸುಳಿ ಬಾ

ದೇವದೇವರನು ತಣಿಸಿ ಬಾ
ದಿಗ್ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ.. ಇಳಿದು ಬಾ. ।1।

ನಿನಗೆ ಪೊಡಮಡುವೆ.. ನಿನ್ನನುಡುತೊಡುವೆ
ಏಕೆ ಎಡೆತಡೆವೆ.. ಸುರಿದು ಬಾ
ಸ್ವರ್ಗ ತೊರೆದು ಬಾ.. ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯಿ ಇಳಿದು ಬಾ ।2।



## 58 ಹಸಿರು ಹಸಿರಿನ ಹೆಸರಿಲ್ಲದ ಮರ

**– ಡಾ. ಎಚ್.ವೆಂಕಟೇಶಮೂರ್ತಿ**

ಹಸಿರು ಹಸಿರಿನ ಹೆಸರಿಲ್ಲದ ಮರ
ಹರಿಯದಿರೋ ಅದರೆಲೆಯಾ
ಆ ಎಲೆಯಲ್ಲಿ ಮಲಗಿರಬಹುದು
ನಮ್ಮನು ಕಾಯುವ ದೈವ ॥ಪ॥

ಗಾಳಿಗೆ ತೂಗುವ ತೊಟ್ಟಿಲು ಈ ಮರ
ಮುರಿಯದರೋ ಆ ಹರೆಯ
ಆ ಹರೆಯಲ್ಲಿ ಕುಳಿತಿರಬಹುದು
ಗೋಪಿ ಜನರ ಸುದೈವ ॥1॥

ಬಿಸಿಲಿನ ದಾಳಿ ತಲೆಯಲಿ ತಾಳಿ
ನೆರಳ ನೀಡುವದು ನೆಲಕೆ
ಆ ನೆಲದಲ್ಲೇ ಅರಳಿರಬಹುದು
ಬುದ್ಧನ ಕರುಣೆಯ ಬೆಳಕೆ ॥2॥

ಸಾವಿರ ಜೀವಕೆ ಆಸರೆ ಈ ಮರ
ನಿಸ್ವಾರ್ಥದ ಸೆಲೆ ಸ್ಫೂರ್ತಿ
ಕಡಿಯುವ ಕೊಡಲಿಗು ನೆರಳನು ನೀಡುವ
ವಾತ್ಸಲ್ಯದ ಪ್ರತಿಮೂರ್ತಿ ॥3॥

# 57. ಹಸಿರಿನ ಓಕುಳಿ

– ಜೀವರಾಜ ಛತ್ರದ

ಹಸಿರಿನ ಓಕುಳಿ ಗಿಡಮರದೊಳಗೆ
ಹೊಸತನ ಚಿಗುರಿದೆ ಹಸಿರಾಗಿ
ನವಗಾನದ ಮದ ಹದಗೊಂಡಿದೆ ಶೃತಿ
ಕೋಗಿಲೆ ಪಂಚಮ ಉಸಿರಾಗಿ
ಕೂಹೂ ಕೂಹೂ ಗಾನದ ಕೂಜನಕೆ
ಕವಿ ಸವಿ ಬರಹದ ಭಾಜನಕೆ ॥ಪ॥

ಶಂಕರಿ ನೋಡಲು ಶಾರ್ವರಿ ಬರುವಳು
ವಿಕಾರಿ ವಿದಾಯ ಈ ದಿನಕೆ
ಝೇಂಕರಿಸುತಿವೆ ಹೂಗಳ ಬನದಲಿ
ದುಂಬಿಗಳಂದಿನ ಹೊಸ ದಿನಕೆ
ಯುಗ ಯುಗ ಕರೆದಿದೆ ಯುಗಾದಿಗೆ
ಜಗ ಮಗ ಗೊಳಿಸಿದೆ ಹೊಸಹಾದಿಗೆ ॥1॥

ಹಳೆ ಎಲೆ ಗೊಬ್ಬರ ತಾಯಿಯ ಬೇರಿಗೆ
ಎಳೆ ಎಲೆ ಶ್ಯಾಮಲೆ ತೇರಿನಲಿ
ನವ ಚಿಗುರಿನ ಸಂಭ್ರಮದಿ ಯುಗಾದಿಯು ಬರುತಿದೆ
ಹಾಡುವ ಬನ್ನಿರಿ ಮನಬಿಚ್ಚಿ
ಕೂಹೂ ಕೂಹೂ ಗಾನದ ಕೂಜನಕೆ
ಕವಿ ಸವಿ ಬರಹದ ಭಾಜನಕೆ ॥2॥



# 38 ಪಾತರಗಿತ್ತೀ ಪಕ್ಕಾ.

– ಅಂಬಿಕಾತನಯ ದತ್ತ

ಪಾತರಗಿತ್ತಿ ಪಕ್ಕಾ– ನೋಡೀದೇನೇಽ ಅಕ್ಕಾ ! ।ಪ।

ಹಸಿರು ಹಚ್ಚಿ ಚುಚ್ಚಿ – ಮೇಲಽಕರಿಸಿನ ಹಚ್ಚಿ
ಹೊನ್ನೆ ಚಿಕ್ಕಿ ಚಿಕ್ಕಿ– ಇಟ್ಟು ಬೆಳ್ಳೀ ಅಕ್ಕಿ
ಸುತ್ತೂ ಕುಂಕುಮದೆಳಿ– ಎಳೆದು ಕಾಡಿಗೆ ಸುಳಿ

ಗಾಳೀ ಕೆನೀಲೇನಽ –ಮಾಡಿದ್ದಾರ ತಾನ !
ನೂರು ಆರು ಪಾರು– ಯಾರು ಮಾಡಿದ್ದಾರು !

ಏನು ಬಣ್ಣ ಬಣ್ಣ – ನಡುವೆ ನವಿಲಗಣ್ಣ!
ರೇಶಿಮೆ ಪಕ್ಕ ನಯ– ಮುಟ್ಟಲಾರೆ ಭಯ!

ಹೂವಿನ ಪಕಳಿಗಿಂತ– ತಿಳಿವು ತಿಳಿವು ಅಂತ?
ಹೂವಿಗೆ ಹೋಗಿ ತಾವ– ಗಲ್ಲಾ ತಿವಿತಾವ

ಬನಬನದಾಗ ಆಡಿ– ಪಕ್ಕಾ ಹುಡಿ ಹುಡಿ,
ಹುಲ್ಲುಗಾವಲದಾಗ – ಹಳ್ಳೀಹುಡುಗೀ ಹಾಂಗ –

# 39 ಪಶ್ಚಿಮ ಕಾನನ ನಯನ ಮನೋಹರ

**ಕೃಪೆ: ಭೈರುಂಬೆ ಹೈಸ್ಕೂಲ್**

ಪಶ್ಚಿಮ ಕಾನನ ನಯನ ಮನೋಹರ
ಹಸಿರು ಉಡುಗೆ ಸಿಂಗಾರದಲಿ
ಓಡುವ ನದಿಯು ಧುಮುಕುವ ಝರಿಯು
ಏನು ಚಂದ ವೈಯ್ಯಾರದಲಿ ॥ಪ॥

ಗಿರಿಕಂದರಗಳು ಹೊಳೆಕೊಳ್ಳಗಳು
ಜುಳುಜುಳು ನಾದ ನಿನಾದದಲಿ
ಹಸಿರಿನ ವನಸಿರಿ ಬದುಕುತ ಸಾಗಿವೆ
ಚೋರ ಮನುಕುಲದ ಭೀತಿಯಲಿ ॥1॥

ನಳನಳಿಸುವ ಈ ಹಸಿರಿನ ಉಸಿರು
ಬಸಿರಿನ ಹಸಿರಲಿ ಬದುಕಿನ ಉಸಿರು
ಮರವನು ಕಡಿಯಲು ಕೊಡಲಿಯ ಇಡಲು
ಬರಿದಾಗುವದೀ ವನಸಿರಿ ಮಡಿಲು ॥2॥

ಅಳಿಯದೇ ಉಳಿದರೆ ಸಂಜೀವಿನಿಯದು
ಗಿಡಮೂಲಿಕೆಗಳು ಭರಪೂರ
ಹಸಿರನು ರಕ್ಷಿಸಿ ಭಕ್ತರ ಪೊರೆಯುವ
ಸ್ವರ್ಣವಲ್ಲೀ ಶ್ರೀ ಗಂಗಾಧರೇಂದ್ರ ಗುರುವರ ॥3॥



# 56. ವಂದಿಪೆನು ಈ ಭೂಮಿಗೆ

**ಬಾಲಕೃಷ್ಣ ಕಾಮತ್ ಕಳಸ**

(ಚಿಮ್ಮುತಿದೆ ನೋಡಿಲ್ಲಿ ಧ್ಯೇಯಕಾರಂಜಿ ಪುಸ್ತಕದಿಂದ)

ವಂದಿಪೆನು ಈ ಭೂಮಿಗೆ ನಮನ ಭಾರತ ಮಾತೆಗೆ ॥ಪ॥

ಹರನ ಹೊತ್ತಿಹ ಹಿರಿಯ ಗಿರಿಯಿದು ಹಿಮದ ಹೂವಿನ ಹಂದರ
ಮೂರುಸಾಗರ ಮಿಲನಗೊಂಡಿಹ ಮಹಿಮೆಯಾಂತಿಹ ಮಂದಿರ
ತೊದಲು ನುಡಿಗಳ ತಪ್ಪು ತಿದ್ದುತ ತತ್ವ ತೋರಿದ ತಾಯಿಗೆ
ಮಡಿಲ ಮಕ್ಕಳಿಗೆಲ್ಲ ಮಮತೆಯ ಮಧುವನುಣಿಸಿದ ॥1॥

ತರಳೆರೆಲ್ಲರ ತಮವ ತೊಳೆಯುವ ತೀರ್ಥತೊರೆಗಳ ತಾಣವು
ಉನ್ನತಿಯ ಉತ್ತುಂಗಕೇರಿದ ಉತ್ತಮರ ಉದ್ಯಾನವು
ಸಪ್ತ ಸಾಗರ ಸುತ್ತಿ ಸುಳಿದಿಹ ಸಂಸ್ಕೃತಿಯ ಸಿರಿ ಸೌರಭ
ಧರೆಗೆ ದಾರಿಯ ದೀಪದಂತಿಹ ದಿವ್ಯ ದರ್ಶನ ದುರ್ಲಭ ॥2॥

## 55. ಧವಳ ಹಿಮದ ಗಿರಿಯ ಮೇಲೆ

**–ಬಾಲಕೃಷ್ಣ ಕಾಮತ್ ಕಳಸ**

(ಚಿಮ್ಮುತಿದೆ ನೋಡಿಲ್ಲಿ ಧ್ಯೇಯಕಾರಂಜಿ ಪುಸ್ತಕದಿಂದ)

ಧವಳ ಹಿಮದ ಗಿರಿಯ ಮೇಲೆ ಅರುಣ ಧ್ವಜವ ಹಾರಿಸಿ
ಮುಗಿಲ ಏಣಿ ಏರಿನಿಂದು ವಿಜಯಭೇರಿ ಬಾರಿಸಿ ॥ಪ॥

ಸಿಂಧುಕಣಿವೆಯೊಡಲಿನಿಂದ ವೀರಗಾನ ಮೊಳಗಲಿ
ಧ್ಯೇಯರವಿಯ ಕಿರಣ ತರುಣರೆದೆಯ ಗುಡಿಯ ಬೆಳಗಲಿ
ಎದ್ದು ನಿಲ್ಲು ಭಾರತ ದಿವ್ಯ ಪ್ರಭೆಯ ಬೀರುತ ॥1॥

ಮನವ ಹಸಿರುಗೊಳಿಸುತಿಹಳು ಭಾವಗಂಗೆ ಅನುದಿನ
ಇಳೆಯ ಕೊಳೆಯ ತೊಳೆಯುತಿಹಳು ತಾಯಿ ತುಂಗೆ ಕ್ಷಣ ಕ್ಷಣ
ನೆಲವಿದೆಮ್ಮ ಪಾವನ ಎನಿತು ಧನ್ಯ ಜೀವನ ॥2॥

ನಾಡಗುಡಿಯ ಮೂರು ಕಡೆಯು ಪೊರೆವ ಶಾಂತಸಾಗರ
ಭಾರತೀಯರ ಹೃದಯವಿಂದು ಕ್ಷಾತ್ರತೇಜದಾಗರ
ಸ್ಫೂರ್ತಿ ಗೌರಿಶಂಕರ ಕಾಲಯಮನು ಕಿಂಕರ ॥3॥



## 40 ಮನೆಮದ್ದಿನ ಲಾವಣಿ

**– ಶ್ಯಾಮಲಾ ಹೆಗಡೆ** (ಸಂಗ್ರಹದಿಂದ)

ಕೇಳಿರಿ ಕೇಳಿರಿ ಎಲ್ಲ ಬಂಧುಗಳೇ
ಪೇಳುವೆ ನಾನು ಕಥೆಯನ್ನು
ಮನೆ ಮದ್ದಿನ ಗಿಡಗಳ ಕಥೆಯನ್ನು
ಚೆನ್ನಾಗಿ ಆಲೈಸಿ ಜೀವನದಿ ಪಾಲೈಸಿ
ಸ್ವಾಸ್ಥ್ಯ ಜೀವನವ ಸಾಗಿಸಿರಿ ॥1॥

ಮನೆಯ ಸುತ್ತಮುತ್ತ ಕಣ್ಣು ಹಾಯಿಸಿದಾಗ
ಕಾಣ್ವದು ನಿಮಗೆ ಸಸ್ಯ ಸಂಜೀವಿನಿ।
ಕಳೆಯೆಂದು ಕೀಳದೆ ಕಲೆಯೆಂದು ಸಾಕಿರಿ
ಕೊಡುವದು ನಿಮಗೆ ವನದ ಸಿರಿ ॥2॥

ಗರಿಕೆ ಹಲ್ಲು ಎಂದು ಮೂಗು ಮುರಿಯದಿರಿ
ಮೂಗಿನ ದೋಷಕೆ ಹಿರಿಮದ್ದು
ಶೀತ ಕೆಮ್ಮು ಜ್ವರ ಇತ್ಯಾದಿಗೆ
ಇದುವೇ ನೋಡು ಸಿಡಿಮದ್ದು ॥3॥

ಕಹಿಬೇವೆಂದು ಮುಖ ಹಿಂಡದಿರಿ
ಕಾಮಧೇನು ಇದು ಜಗಕೆಲ್ಲಾ।
ಹಿಂಡಿದ ಮುಖವ ನಗಿಸುತ ಬೇವು
ಜೀವನವಾ ಸಿಹಿ ಮಾಡುವುದು ॥4॥

ಪೂಜೆಗೆ ಮಾತ್ರ ತುಳಸಿ ಎಂದು
ಜೋಡಿಸಿ ಕೈಯ್ಯ ಕೂಡದಿರಿ
ತುಳಸಿ ದಳವ ನಿತ್ಯವು ಸೇವಿಸಿ
ಶೀತ ಕೆಮ್ಮು ದೂರಾಗುವದು ॥5॥

ಎಕ್ಕದ ಗಿಡದಲಿ ಗಣಪನಿರುವನೆಂಬ
ನಂಬಿಕೆ ಇದ್ದರೆ ಸಾಲದು
ಬರಿ ನಂಬಿಕೆ ಇದ್ದರೆ ಸಾಲದು ।
ಎಕ್ಕದ ಎಲೆಗೆ ಹರಳೆಣ್ಣೆ ಸವರಿ
ನೋವಿಗೆ ಕಾವು ನೀಡಿರಿ ॥6॥

ಶಿವನಿಗೆ ಪ್ರಿಯನೆಂಬ ಬಿರುದನು ಹೊತ್ತ
ಬಿಲ್ವ ವೃಕ್ಷವಿದು ನಮ್ಮಯ ಗಿಡ ಕಾಣಾ
ಆಮಶಂಕೆ ಮಧುಮೇಹ, ನಿಶ್ಯಕ್ತಿಗೆ
ದಿವ್ಯೌಷಧವದು ಅದುವೇ ರಾಮಬಾಣಾ ॥7॥

ಚಂದದ ಗುಲಾಬಿ ಎಂದು ಪೇಳುತಾ
ಪರಿಮಳ ಮಾತ್ರ ಮೂಸದಿರಿ
ಗುಲಾಬಿ ಜೊತೆಗೆ ಮಧುವನು ಸೇರಿಸಿ
ಸೇವಿಸಿ ಅರಿಯಿರಿ ಅದರ ಗುಣ ॥8॥



# 54. ಧರೆಗೆ ಜ್ವರವು ಬಂದಿದೆ

(ವಿಶ್ವ ಭೂಮಿ ದಿನಕ್ಕಾಗಿ ರಚಿಸಿದ ಹಾಡು)

**–ಬಾಲಕೃಷ್ಣ ಕಾಮತ್ ಕಳಸ**

(ಚಿಮ್ಮುತಿದೆ ನೋಡಿಲ್ಲಿ ಧ್ಯೇಯಕಾರಂಜಿ ಪುಸ್ತಕದಿಂದ)

ಧರೆಗೆ ಜ್ವರವು ಬಂದಿದೆ ತಾಪ ಮೇರೆ ಮೀರಿದೆ
ತಂಪನುಣಿಸಿ ದಾಹ ತಣಿಸಿ ಎಂದು ಚೀರಿ ಸಾರಿದೆ।

ಜನ್ಮವಿತ್ತು ಎಮ್ಮಹೊತ್ತು ತುತ್ತನಿತ್ತ ಧಾರಿಣಿ
ಮನುಜ ಪ್ರಾಣಿ ಪಕ್ಷಿಗಳಿಗೆ ಅವಳೆ ಸೌಖ್ಯದಾಯಿನಿ
ಸಕಲ ಜೀವರಾಶಿಗಳನು ಪೊರೆವ ಮಹಾ ಮಾತೆಯು
ಸುಖವ ತ್ಯಜಿಸಿ ನೋವ ಸಹಿಸಿ ನಲಿವನೀವ ತಾಯಿಯು॥1॥

ಅವಳ ಗರ್ಭವನ್ನು ಬಗೆದು ಜೀವಜಲವ ಮೊಗೆದು ಮೊಗೆದು
ಬರಡುಗೈದೆವವಳ ಮಡಿಲ ಖನಿಜ ರಾಶಿಯನು ತೆಗೆದು
ಕಾಸಿಗಾಗಿ ಕುರುಡರಾಗಿ ಧರೆಯ ಮೊರೆಗೆ ಕಿವುಡರಾಗಿ
ಮೆರೆವ ನರರ ದುರುಳತನದಿ ನರಳುತಿಹಳು ಮೂಕಳಾಗಿ ॥2॥

ಹೆಮ್ಮರಗಳ ಕೊರಳ ಕೊಯ್ದು ಕಾಡುಪ್ರಾಣಿಗಳನು ಕೊಂದು
ಬೆಟ್ಟಗಳನು ಮಟ್ಟಮಾಡಿ ಹರಿವ ನದಿಗೆ ತಡೆಯ ತಂದು
ಸುರಿದ ತ್ಯಾಜ್ಯ ರಾಶಿಯಿಂದ ಮಲಿನವಾಯ್ತು ಜಲದಿ ಇಂದು
ದುಷ್ಟತನವ ಮೆರೆಯುತಿಹನು ಸ್ವಾರ್ಥಕಾಗಿ ಮನುಜನಿಂದು ॥3॥

ಎಚ್ಚರಾಗು ನರನೇ ನೀನು ಹುಚ್ಚನಂತೆ ಆದೆಯೇಕೆ?
ತ್ಯಜಿಸದಿರಲು ಹೀನ ಬುದ್ಧಿ ಕಾದಿದೆ ವಿನಾಶ ಜೋಕೆ
ಸೃಷ್ಟಿಗೆಲ್ಲ ನೀನೆ ಒಡೆಯ ಎಂಬ ಭ್ರಮೆಯ ಬಿಸುಟು ಬಾಳು
ಸಾಮರಸ್ಯದಿಂದ ಬದುಕು ಮೌಢ್ಯ ತೊರೆದು ಮೇಲಕೇಳು ॥4॥

## 53. ಬಾರೋ ಹಸಿರಿನ ಹರಿಕಾರ

– ಬಾಲಕೃಷ್ಣ ಕಾಮತ್ ಕಳಸ

(ಚಿಮ್ಮುತಿದೆ ನೋಡಿಲ್ಲಿ ಧ್ಯೇಯಕಾರಂಜಿ ಪುಸ್ತಕದಿಂದ)

ಬಾರೋ ಹಸಿರಿನ ಹರಿಕಾರ
ನೀಡೋ ನಿನ್ನಯ ಸಹಕಾರ ॥ಪ॥
ಹಸಿರಿಗೆ ಉಸಿರನು ತುಂಬಿಸಲು
ಮಾಡುವ ಬಾ ಧೃಡ ನಿರ್ಧಾರ ॥ಅ.ಪ॥
ಬೆಳೆಸುತಲಿಹರು ನೀಲಗಿರಿ
ಒಣಗುತಲಿಹುದು ನೀರಝುರಿ
ಮಾಯ ಆಯಿತು ಗೋಮಾಳ
ರೈತಗೆ ಉಳಿವುದು ಬರೀ ಸಾಲ
ನಾವೇ ತಂದಿಹ ಸರಕಾರ
ಮಾಡುತಲಿಹುದು ಅಸಹಕಾರ ॥
ಕಾಡಿನ ರಾಣಿ ಭಗವತಿಯ
ಕರಗಳ ಕಡಿವರು ಕೇಡಿಗರು
ನೋಡಿಯು ನೋಡದ ಜನರೆಲ್ಲ
ಶಿಖಂಡಿಗಳು ಬಲು ಹೇಡಿಗಳು
ಕಾಡನು ಮಾಡಲು ಸಂಹಾರ
ಕಳ್ಳರಿಗುಂಟೇ ಅಧಿಕಾರ ॥2॥
ಎಲ್ಲಡೆ ಬಗೆಬಗೆ ಕಾರ್ಖಾನೆ
ನುಂಗಿದೆ ನಾಡ ಖಜಾನೆಯನೆ
ಉಗುಳಿದೆ ಕಸ ಕಲ್ಮಶವನ್ನು
ಹುಡುಕಲೇ ಬೇಕು ಪರಿಹಾರ
ಅಳಿಸಲೇಬೇಕು ಅನಾಚಾರ ॥3॥



## 41. ಜೀವನ ಸೃಷ್ಟಿಯ ಸಂಕಲನ

– ಜಲಭಾರತಿ ಕರ್ನಾಟಕ

ಜೀವನ ಸೃಷ್ಟಿಯ ಸಂಕಲನ
ಸಿಂಧುತ್ವದ ನವಜಾಗರಣ
ಗ್ರಾಮ ಗ್ರಾಮದಿ ಮನೆ ಮಂದಿರದಿ
ಸುಜಲ ಜಾಗೃತಿಯ ಸಂಚಲನ॥

ಗಿರಿ ಕಂದರದಿ ಕಾನನದಿ ಹಸಿರಿನ ಹೊದಿಕೆಯ ಸಮತಲದಿ
ತಾಯಿ ಭಾರತಿಯ ಪಾದ ತೋಯಿಸುವ
ಹರಿವ ಧಮನಿಗಳ ಎಡಬಲದಿ ॥

ನವ ಚೈತನ್ಯದ ನೊಗವೇರಿ ಉಳುಮೆಯ ನೇಗಿಲು ಭುವಿಸೀಳಿ
ಗೊರಸಿನ ಲಾಸ್ಯದ ಲಹರಿಗೆ ನಳಿಯುವ
ತರಿಯ ಬಗ್ಗಡದ ಕಣಕಣದಿ ॥

ಕೆರೆಕಲ್ಯಾಣಿ ತಲಪರಕೆ ಒಡ್ಡು ಕುಂಟೆಗಳ ಕನವರಿಕೆ
ಸಾಂಪ್ರದಾಯಿಕ ನೆನಪಿನಂಗಳದಿ
ಕರ್ಮಭೂಮಿಯ ಬದುಗಳಲಿ ॥

ನವ ಮುಂಗಾರಿನಲಂಕಾರ ಕಾಮನಬಿಲ್ಲಿನ ಚಿತ್ತಾರ
ಉದಕದ ಹನಿಗಳ ಈಡಿಗೆ ಮಾಗಿದ
ಕ್ಷಮಯಾ ಧರಿತ್ರಿಯ ಓಂಕಾರ ॥

## 42. ಮಳೆಕೊಯ್ಲು ಮಾಡೋಣ

ಮಳೆಕೊಯ್ಲು ಮಾಡೋಣ ಬನ್ನಿರೋ
ಜಲಕ್ಷಾಮ ನೀಗೋಣ ಬನ್ನಿರೋ।

ಊರ ತುಂಬೆಲ್ಲಾ ಕೆರೆ ಕಲ್ಯಾಣಿಗಳು
ಗ್ರಾಮೀಣ ಬದುಕಿನ ಜೀವನಾಡಿಗಳು
ಹೂಳೆತ್ತಿ ಜಲನಿಧಿಯ ತುಂಬಿರೋ
ಜಲಕ್ಷಾಮ ನೀಗೋಣ ಬನ್ನಿರೋ॥

ಹಸಿರಿನಾ ಸೆರಗಲ್ಲಿ ಹಳ್ಳಕೊಳ್ಳಗಳು
ಗ್ರಾಮ್ಯ ಜನತೆಯ ಕಾವೇರಿ ಯಮುನೆಯರು
ಮನದ ಕೊಳೆಯ ತೊಳೆಯೋಣ ಬನ್ನಿರೋ
ಜಲಕ್ಷಾಮ ನೀಗೋಣ ಬನ್ನಿರೋ॥

ಬೆಟ್ಟದ ಮಗ್ಗುಲಲ್ಲಿ ಮರಗಳ ಸಾಲುಗಳು
ಮುಗಿಲಿನಾ ವೇಗವನು ತಡೆಯುವ ತೇರುಗಳು
ಇಳೆಯ ಬೇಗೆ ತಣಿಸೋಣ ಬನ್ನಿರೋ
ಜಲಕ್ಷಾಮ ನೀಗೋಣ ಬನ್ನಿರೋ॥

ಹಸಿರಿನಾ ಹೊಲ ಚಂದ, ಮಾಗಿದ ತೆನೆ ಚಂದ
ದುಡಿಯುವ ಕರ ಚಂದ, ಜನಪದ ನುಡಿ ಚಂದ
ನೇಗಿಲಾ ಯೋಗಿ ಮನೆ ಚಂದವೋ
ಗ್ರಾಮ ಸೊಗಡು ಸವಿಯೋಣ ಬನ್ನಿರೋ॥



## 52. ಪಡುವಣ ತೆಂಕಣ ಮೂಡಣದಂಚಿನ

**– ಬಾಲಕೃಷ್ಣ ಕಾಮತ್ ಕಳಸ**

(ಚಿಮ್ಮುತಿದೆ ನೋಡಿಲ್ಲಿ ಧ್ಯೇಯಕಾರಂಜಿ ಪುಸ್ತಕದಿಂದ)

ಪಡುವಣ ತೆಂಕಣ ಮೂಡಣದಂಚಿನ ದಿವ್ಯಾಂಬುದಿ ಸಂಗಮವು
ಶಕ್ತ ಸಾಗರವು ಭಕ್ತಿಯಾಗರವು ಉಕ್ಕೇರುತಲಿದೆ ಜನಮನವು ॥ಪ॥

ಆ ಪ್ರಲಯಂಕರ ರುದ್ರಭಯಂಕರ ಹರಮಂದಿರ ಹೈಮಾದ್ರಿ
ಜೀವನದಿಯುಗಮ ಭಾವನಿಧಿ ಪರಮ।
ಮಹಿಮಾನ್ವಿತ ವರ ಗಂಗೋತ್ರಿ ॥1॥

ಗಿರಿಝುರಿ ಕಂದರ ವನಸಿರಿ ಸುಂದರ ಗುಡಿಗೋಪುರದುದ್ಯಾನ
ಗಂಗೆ ತುಂಗೆಯರ ಸಿಂಧು ಯಮುನೆಯರ।
ಮಂಜುಳ ಮಂಗಳ ಅಭಿಯಾನ ॥2॥

## 50. ಗಂಗೆ ತುಂಗೆ ಹರಿವ ನಾಡು

**–ಬಾಲಕೃಷ್ಣ ಕಾಮತ್ ಕಳಸ**

(ಚಿಮ್ಮುತಿದೆ ನೋಡಿಲ್ಲಿ ಧ್ಯೇಯಕಾರಂಜಿ ಪುಸ್ತಕದಿಂದ)

ಗಂಗೆ ತುಂಗೆ ಹರಿವ ನಾಡು ನಮ್ಮ ಭಾರತ ।
ಸ್ವರ್ಗಕ್ಕಿಂತ ಮಿಗಿಲ ನಮ್ಮ ಭವ್ಯ ಭಾರತ ॥ಪ॥

ಬೆಳ್ಳಿಬೆಟ್ಟ ತಾಯ ಶಿರಕೆ ಹೊಳೆವ ಮುಕುಟವು
ಹಚ್ಚಹಸಿರ ಸಸ್ಯರಾಶಿ ದಿವ್ಯ ವಸ್ತ್ರವು
ಮೂರು ಜಲಧಿ ಒಂದುಗೂಡಿ ಪಾದ ತೊಳೆವವು
ಕೋಟಿ ಅಲೆಗಳಿಂದ ನಿತ್ಯಸ್ತುತಿಯ ಗೈವವು ॥1॥

---

## 51. ಕಾವೇರಿ ತಾಯಿ

**– ಪಂಜೆ ಮಂಗೇಶರಾಯರು**

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆಡಗಿನ ರೂಪಿನಿಂದ ನಿಂದಳೋ
ಎಲ್ಲಿ ಮುಗಿಲು ಮಿಂಚಿನೋಳ್ ಕಾವೇರಿ ಹೊಳೆ ಹೊಳೆ ಹೊಳೆವಳೋ
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆವಳೋ
ಅಲ್ಲಿ ಆ ಕಡೆ ನೋಡಲಾ ಅಲ್ಲಿ ಕೊಡಗರ ನಾಡವಾ
ಅಲ್ಲಿ ಆ ಕಡೆ ನೋಡಲಾ ಅಲ್ಲಿ ಕೊಡಗರ ಬೀಡವಾ ॥1॥



## 43. ಬೆಳ್ಳಕ್ಕಿಗಳು

**– ಸು.ರಂ ಎಕ್ಕುಂಡಿ**

(ಕೆ.ವಿ. ಸುಬ್ಬಣ್ಣ ನೆನಪಿನ ಮೊದಲ ಓದು ಕೃತಿಯಿಂದ)

ಬೆಳ್ಳಕ್ಕಿ ಸಾಲಾಗಿ ನಡೆದಾವೋ
ಮುಗಿಲಿನ ಹಾದಿಯಾ ಹಿಡಿದಾವೋ ॥ಪ॥

ಅಲ್ಲೊಂದು ಇಲ್ಲೊಂದು ನಕ್ಷತ್ರ ಬೆಳಗಿದೆ
ಮೆಲ್ಲಗೆ ನಸುಕಿನ ನೊರೆಬೆಳಕಿಳಿದಿದೆ
ಕೆನೆಹಾಲು ರೆಕ್ಕೆಯ ಬಡಿದಾವೋ ॥

ಊರೆಲ್ಲಾ ನೆಲದಲ್ಲಿ ಮೈಚಾಚಿ ಮಲಗಿವೆ
ದೂರದ ಕೆರೆ ಬೆಟ್ಟ ಕೈ ಮಾಡಿ ತೊಲಗಿವೆ
ಬರುವೆವು ನಾವೆಂದು ನುಡಿದಾವೊ ॥

ಕಡಲಿನ ನೀಲಿಯ ವಿಸ್ತಾರ ನೋಡಿವೆ
ಕಡಲಿನ ಮೊರೆ ಕೇಳಿ ಕೊರಳೆತ್ತಿ ಹಾಡಿವೆ
ಹಿಡಿಸದ ಹಿಗ್ಗನು ಪಡೆದಾವೋ ॥

ಬಿಳಿರೆಕ್ಕೆ ಬೀಸಲು ಮೇಲೊಂದು ಮುಗಿಲಿದೆ
ಇಳಿದಲ್ಲಿ ಈಸಲು ಕೆಳಗೊಂದು ಕಡಲಿದೆ
ಎಲ್ಲೆಲ್ಲೂ ಅಮೃತವಾ ಕುಡಿದಾವೊ ॥

ಬೆಳ್ಳಕ್ಕಿ ಸಾಲಾಗಿ ನಡೆದಾವೋ
ಕಡಲಿನ ತೀರದಿ ಸುಳಿದಾವೋ ॥

## 44. ಗಿಡನೆಡಿ ಗಿಡನೆಡಿ

**– ರಾಜೀವ ಅಜ್ಜೀಬಳ**

(ಮೇದಿನಿ ಕವನ ಸಂಕಲನದಿಂದ)

ಗಿಡನೆಡಿ ಗಿಡನೆಡಿ ಗಿಡಾನೆಡಿ
ಅವು ಮರವಾಗಲು ಬಿಡಿ ।
ರಕ್ಷಿಸಿ ಪರಿಸರದ ನಾಡಿ
ಕೊಡಲಿ ಕತ್ತಿಗಳ ದೂರವಿಡಿ ॥

ಬಾಯಾರಿದೆ ಭುವಿಯೊಡಲು
ಮುನಿದಿದೆ ಬಾನಿನ ಬಯಲು
ತಪ್ಪಿದೆ ಸಮತೋಲನ ಸೃಷ್ಟಿಗೆ
ಎಲ್ಲಿದೆ ಆ ಮುಂಗಾರಿನ ಹೊನಲು ॥

ನಮಗೇಕೀ ಸಂಹರಿಸುವ ತೆವಲು
ಇದರಲಿ ನಮಗೆಂದಿಗೂ ಸೋಲು
ಕರಗುತಿದೆ ದಿನೇ ದಿನೇ ಕಾಡು
ವಿಷವೇರಿದೆ ಬಾನಿನವರೆಗೂ ॥

ನಮ್ಮದೀ ನೆಲ ಜಲ ವಾಯು
ಕಲುಷಿತಗೊಂಡಿದೆ ಭುವಿಯು
ಬಿಡದೆಂದಿಗೂ ಮಲಿನತೆ ಪಿಡುಗು
ರೋಗ ರುಜಿನಗಳು ಅಡಿಗಡಿಗೂ ॥

ಜೀವಲೋಕದ ಶ್ರೇಷ್ಠರು ನಾವು
ಜೀವಜಾಲದ ಕೊಂಡಿಗಳು
ಸಕಲ ಜೀವಿಗಳಿರಲೆನ್ನುತ ನಾವು
ಉಳಿಸುವ ವನ ನಿಕ್ಷೇಪವನು ॥



## 49 ಓ ದಾರಿಗನೇ

ಓ ದಾರಿಗನೇ ಪ್ರಿಯ ನೇಹಿಗನೇ
ಗೈಯುವ ಬಾ ನವಯುಗ ನಿರ್ಮಾಣ
ಸಮಾಜದೇವತೆಗರ್ಪಿತವಾಗಲಿ
ನಮ್ಮೆಲ್ಲ ತನು ಮನ ಧನ ಪ್ರಾಣ ॥ಪ॥

ಹಿಡಿಕೂಳಿನ ಬರಿಗೋಳಿನ ಬಾಳಿಗೆ
ಮಾರುವೆಯಾ ತನುಮನವನು ಗೆಳೆಯಾ
ಪಶುಬಲದಿದಿರಿಗೆ ಅಡಿಯಾಳಾಗುತ
ಮರೆಯುವೆಯಾ ಮಾನವ್ಯದ ಗುರಿಯಾ ॥1॥

ಭ್ರಮೆಯನು ಕೊಡವಿಕೊ ಕಣ್ತೆರೆದರಿತುಕೊ
ಮಾನವ ಜೀವನದನಂತ ಮಹಿಮೆ
ಬಿಸಿಯಾರುವ ಮೊದಲೇ ಜಗವರಿಯಲಿ
ನಿನ್ನಯ ಪವಿತ್ರ ರಕ್ತದ ಹಿರಿಮೆ ॥2॥

ಇಚ್ಛಾಶಕ್ತಿಯು ಭೂಮವನಪ್ಪಲಿ
ಮೋಹದ ಭೋಗದ ಕನಸನು ಮುರಿದು
ಹೃದಯದ ಹಕ್ಕಿಯು ಆಗಸವಾಳಲಿ
ಸೋಗಿನ ಸೊಬಗಿನ ಪೊರೆಯನು ಹರಿದು ॥3॥

ಬಾಳೆಲ್ಲವು ಮುಡುಪಾಗಿಡು
ವೀರನೆ ದಿನದಿನವೂ ಹೊಸ ಹೊಸ ಸಾಹಸಕೆ
ಧ್ಯೇಯದ ಆ ಆನಂದದಿ ವಿಹರಿಸು
ಹರಡಲಿ ಚಿರಕೀರ್ತಿಯು ಯುಗ ಯುಗಕೆ ॥4॥

## 48 ಬಿದಿರು ನಾನಾರಿಗಲ್ಲದವಳು

– ಶಿಶುನಾಳ ಶರೀಫ

ಬಿದಿರು ನಾನಾರಿಗಲ್ಲದವಳು
ಹುಟ್ಟುತ್ತಾ ಹುಲ್ಲಾದೇ
ಬೆಳೆಯುತ ಮರವಾದೆ
ವನಿತೆಯರಿಗೆ ಕೇರುವ ಮರವಾದೆ ॥1॥

ಮುದುಕಗೆ ಬಡಿಗ್ಯಾದೆ
ಮುತ್ತ್ಯಾಗ ಬೆತ್ತವಾದೆ
ಮಹಾತ್ಮರ ಕೈಯೊಳಗೆ ಬೆತ್ತವಾದೆ ॥2॥

ಅಂಬಿಗನಿಗೆ ಕೋಲಾದೆ
ದಂಡಿಗಿ ನಾನಾದೆ
ನೀಟುಳ್ಳ ಹುಡುಗರಿಗೆ ಬೇಟೆಯ ಬಡಿಗ್ಯಾದೆ ॥3॥

ಪಲ್ಲಕ್ಕಿ ದಂಡಿಗೆಯಾದೆ
ಪತ್ರಿಗೆ ಬುಟ್ಟಿಯಾದೆ
ಎಲ್ಲಮ್ಮನ ಗುಡ್ಡದೊಳಗೆ ಅಡ್ಲಿಗಿ ನಾನಾದೆ ॥4॥

ಹಂದರ ಹಾಲಗಂಬನಾದೆ
ದಂಡಿ ಬಾಸಿಂಗನಾದೆ
ದೊಡ್ಡ ದೊಡ್ಡ ಮಠದೊಳಗೆ ಕಜ್ಜಾಯ ಬುಟ್ಟಿಯಾದೆ ॥5॥

ತಿಪ್ಪಿಯ ತೆಳಗಿದ್ದೆ
ಅದರುದ್ದ ಬೆಳೆದಿದ್ದೆ
ಸಿದ್ದರಾಮೇಶ್ವರನಿಗೆ ನಂದಿ ಕೋಲಾದೆ ॥6॥

ದೇಶದೊಳು ಶಿಶುನಾಳ–
ಧೀಶನ ಮಠದೊಳಗೆ
ಸಾಧುರ ಕೈಯೊಳಗೆ ಏಕದಾರಿ ಕೊಳವಿಯಾದೆ ॥7॥



## 45. ಧರೆಗವತರಿಸಿದೆ ಸ್ವರ್ಗದ ಸ್ಪರ್ಧಿಯು

– ಚಂದ್ರಶೇಖರ ಭಂಡಾರಿ, ಬೆಂಗಳೂರು

ಧರೆಗವತರಿಸಿದೆ ಸ್ವರ್ಗದ ಸ್ಪರ್ಧಿಯು
ಸುಂದರ ತಾಯ್ನೆಲವು ನಮ್ಮೀ ತಾಯ್ನೆಲವು
ದೇವಿ ನಿನ್ನಯ ಸೊಬಗಿನ ಮಹಿಮೆಯ
ಬಣ್ಣಿಸಲಸದಳವು ಬಣ್ಣಿಸಲದಳವು ॥ಪ॥

ಧವಳ ಹಿಮಾಲಯ ಮುಕುಟದ ಮೆರಗು
ಕಾಲ್ತೊಳೆಯುತಲಿದೆ ಜಲಧಿಯ ಬುರುಗು
ಗಂಗಾ ಬಯಲಿದು ಹಸಿರಿನ ಸೆರಗು
ಕಣಕಣ ಮಂಗಲವು, ನಮ್ಮೀ ತಾಯ್ನೆಲವು ॥1॥

ಕಾಶಮೀರದಲಿ ಸುರಿವದು ತುಹಿನ
ರಾಜಸ್ತಾನದಿ ಸುಡುವದು ಪುಲಿನ
ಮಲಯಾಚಲದಲಿ ಗಂಧದ ಪವನ
ವಿಧ ವಿಧ ಹೂ ಫಲವು ನಮ್ಮೀ ತಾಯ್ನೆಲವು ॥2॥

ಗಂಗೆ ತುಂಗೆಯರ ಅಮೃತ ಸ್ತನ್ಯ
ಕುಡಿಸುತ ಮಾಡಿದೆ ಜೀವನ ಧನ್ಯ
ಮುಡಿಪಿದು ಬದುಕು ನಿನಗೆ ಅನನ್ಯ
ಕ್ಷಣಕ್ಷಣ ಬಲಫಲವು ನಮ್ಮೀ ತಾಯ್ನೆಲವು ॥3॥

## 46. ಬನ್ನಿ ಮೋಡಗಳೇ ಭರತ ಭುವಿಯ ಕಡೆಗೆ

– ಜಲಭಾರತಿ ಕರ್ನಾಟಕ

ಬನ್ನಿ ಮೋಡಗಳೆ ಭರತಭುವಿಯ ಕಡೆ ಮಳೆಯ ಸುರಿಸ ಬನ್ನಿ
ಶಿಶಿರ ವಸಂತದ ಬೇಗೆಗೆ ದಣಿದಿಹ ಧರೆಯ ತಣಿಸ ಬನ್ನಿ
ನೀರ ಉಣಿಸ ಬನ್ನಿ ॥

ಹರಿವ ತೊರೆಗಳ ಊನಗೊಳಿಸುತಿಹ ಮಾಲಿನ್ಯದ ಜಾಡು
ವಿಷ ವರ್ತುಲದಿ ಸಿಲುಕಿಹ ಪಾವನೆ ಗಂಗೆಯದೀ ಪಾಡು
ಬನ್ನಿ ಮೋಡಗಳೇ ನದಿಯ ಪಾತ್ರದೆಡೆಗೆ ಮಳೆಯ ಸುರಿಸ ಬನ್ನಿ
ಭರತ ದೇಶದ ಜೀವನದಿಗಳಲಿ ನೀರ ಹೊನಲ ತನ್ನಿ
ತುಂಬಿ ತುಳಕ ಬನ್ನಿ ॥

ಧರಣಿ ದಹಿಸುವಾ ವಿಕಟ ವರ್ತನೆಗೆ ವನಸಿರಿಯು ಸೊರಗಿ
ಬಿಸಿಲದಳ್ಳುರಿಗೆ ಮಣ್ಣ ಕಣಕಣದ ಹೊನ್ನ ಬಣ್ಣ ಕರಗಿ
ಬನ್ನಿ ಮೋಡಗಳೇ ಮನದ ವನದ ಕಡೆ ಮಳೆಯ ಸುರಿಸ ಬನ್ನಿ
ಬರದಬೇಗೆಯಲಿ ಬೆಂದ ಕೊರಡಿಗೆ ಎಳೆಯ ಚಿಗುರ ತನ್ನಿ
ಹಸಿರ ಬೆಳೆಸ ಬನ್ನಿ॥

ಬಿರಿದಿದೆ ನೆಲವು ಮುರಿದಿದೆ ನೇಗಿಲು ಮನದಲಿ ಕರಿಛಾಯೆ
ಉರಿಯಲಿ ದೀಪ ಪಸರಿಸೆ ಧೂಪ ತೊಲಗಲಿ ಸಿರಿಮಾಯೆ
ಬನ್ನಿ ಮೋಡಗಳೇ ತರಿಯ ಭುವಿಯ ಕಡೆ ಮಳೆಯ ಸುರಿಸ ಬನ್ನಿ
ನೇಗಿಲ ಯೋಗಿಯ ಹೊಲದಲಿ ಪೈರನು ತುಂಬಿ ಪುಲಕ ತನ್ನಿ
ಕಣಜ ತುಂಬ ಬನ್ನಿ ॥



## 47 ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ

–ಕುವೆಂಪು

ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ॥

ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ
ದನಿಯು ದನ ಕಾಯುವನ ಕೊಳಲೊಡನೆ ಬರಲಿ
ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು
ದಿನ ದಿನವು ಸವಿಯೂಟವಿಕ್ಕುತಿರಲೆನಗೆ॥

ಬಾಂದಳದಿ ಹಾರಿದರು ಭುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ
ಬೈಗಾಗೆ ನಮ್ಮೊಡನೆ ಗಳಪಿಯಲೆದಡ್ಡಾಡೆ
ಗೋಪಾಲನಾಗಿರುವ ತಿಮ್ಮನೆನಗಿರಲಿ॥

ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರರಿತಿರಲಿ
ಸಗ್ಗವಿವನೊಳಗೊಂಡು ಇರಲು ಸಗ್ಗವೆ ಇರಲಿ
ನರಕವಿವನೊಳಗೊಂಡು ಇರಲು ನರಕವೆ ಇರಲಿ॥